# ವಸತಿ ನಿಲಯ ವಿದ್ಯಾರ್ಥಿಗಳಿಗೆ ಜಾಗೃತಿ



**ಹಂಪಿ ಟೈಮ್ಸ್ ಕೊಪ್ಪಳ**

ವಿಶ್ವ ಋತುಚಕ್ರ ನೈರ್ಮಲ್ಯ ದಿನಾಚರಣೆ 2024ರ ಪ್ರಯುಕ್ತ ರಾಷ್ಟ್ರೀಯ ಕಿಶೋರ ಸ್ವಾಸ್ಥ್ಯ ಕಾರ್ಯಕ್ರಮದ ಅಡಿಯಲ್ಲಿ ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಖಿ ಒನ್ ಸ್ಟಾಪ್ ಸೆಂಟರ್, ಜಿಲ್ಲಾ ಮಹಿಳಾ ಸಬಲೀಕರಣ ಘಟಕ, ಶಿಶು ಅಭಿವೃದ್ಧಿ ಯೋಜನಾ ಕಾರ್ಯಾಲಯ ರವರ ಸಂಯುಕ್ತಾಶ್ರಯದಲ್ಲಿ ನಗರದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧೀನದ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯ 1 ಮತ್ತು 2 ಕೇಂದ್ರದ ವಸತಿ ನಿಲಯಗಳಲ್ಲಿ ಮಂಗಳವಾರ ಜಾಗೃತಿ ಕಾರ್ಯಕ್ರಮ ನಡೆಯಿತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ತಿಪ್ಪಣ್ಣ ಸಿರಸಗಿ ಅವರು ಕಾರ್ಯಕ್ರಮ ಉದ್ಘಾಟಿಸಿದರು. ಬಳಿಕ ಮಾತನಾಡಿ, ವಿದ್ಯಾರ್ಥಿನಿಯರಿಗೆ ಮುಟ್ಟು ಎಂದರೆ ಗುಟ್ಟು ಎಂಬ ಕೀಳರಿಮೆ ನಮ್ಮ ಸಮಾಜದಲ್ಲಿ ಶತಮಾನಗಳಿಂದಲೂ ಇದೆ. ಮುಟ್ಟಾದ ಮಹಿಳೆಯನ್ನು ಮನೆಯಿಂದ ಹೊರಗೆ ಕೂರಿಸುವ ಪದ್ಧತಿ ಇಂದಿಗೂ ಕೆಲವೆಡೆ ಜೀವಂತವಾಗಿದೆ. ಇಂತಹ ಮೂಢನಂಬಿಕೆಗಳನ್ನು ಶಿಕ್ಷಣದಿಂದಲೇ ತಡೆಯಲು ಸಾಧ್ಯವಾಗುತ್ತದೆ. ಸಾಮಾನ್ಯವಾಗಿ ಹೆಣ್ಣುಮಕ್ಕಳು ದೈಹಿಕ ಶುಚಿತ್ವ ಅಡಿಯಿಂದ ಮುಡಿವರೆಗೂ ಸ್ವಚ್ಛಗೊಳಿಸುವಲ್ಲಿ ನಿರ್ಲಕ್ಷ ಮನೋ ಧೋರಣೆ ತೋರುವರು. ಕೇವಲ ಮುಖವನ್ನು ಮಾತ್ರ ಸೌಂದರೀಕರಣ ಗೊಳಿಸುವಲ್ಲಿ ಹೆಚ್ಚು ಆಸಕ್ತರಾಗಿರುತ್ತಾರೆ. ಇದರಿಂದ ಅನಾರೋಗ್ಯದ ಜೊತೆಗೆ ಹಲವಾರು ಸಮಸ್ಯೆಗಳಿಗೆ ಕಾರಣವಾಗುತ್ತದೆ. ಹಾಗಾಗಿ ದೈಹಿಕ ಬೆಳವಣಿಗೆಗೆ ಹೆಚ್ಚಿನ ಆಸಕ್ತಿ ನೀಡುವುದು ಅಗತ್ಯವಾಗಿದೆ. ಜೊತೆಗೆ ಯೋಗ ಮತ್ತು ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡು ಶಿಕ್ಷಣಕ್ಕೆ ಒಲವು ನೀಡಬೇಕೆಂದರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾನಂದ ವಿಪಿ ಅವರು ಮಾತನಾಡಿ, ಮಹಿಳೆಯರು ತಮ್ಮ ಋತುಚಕ್ರದ ಸಮಯದಲ್ಲಿ ರಕ್ತಹೀನತೆಯಿಂದ ಮುಕ್ತರಾಗುವುದು, ಪೌಷ್ಟಿಕ ಉತ್ತಮ ಕಬ್ಬಿಣಾಂಶದ ಆಹಾರ ಹಾಗೂ ಸೊಪ್ಪಿನಂತಹ ಆಹಾರವನ್ನು ಸೇವನೆ ಮಾಡಬೇಕು. ಜಿಲ್ಲಾ ಆಸ್ಪತ್ರೆಯಲ್ಲಿ ದೊರೆಯುವ ಕಬ್ಬಿಣಾಂಶ ಮಾತ್ರೆಯನ್ನು ಹದಿಹರೆಯ ಕಿಶೋರಿ ಮಕ್ಕಳು ತೆಗೆದುಕೊಳ್ಳುವುದು ಮತ್ತು ನೈರ್ಮಲ್ಯವನ್ನು ಕಾಪಾಡಿಕೊಳ್ಳುವ ಅಗತ್ಯವಿದೆ. ವಿಶ್ವ ಮುಟ್ಟಿನ ನೈರ್ಮಲ್ಯ ದಿನವು ಉತ್ತಮ ಶಿಕ್ಷಣ ಮತ್ತು ಮುಟ್ಟಿನ ಬಗ್ಗೆ ಜಾಗೃತಿಯನ್ನು ಉತ್ತೇಜಿಸುವ ಮೂಲಕ ಈ ಸಮಸ್ಯೆಗಳನ್ನು ಪರಿಹರಿಸುವ ಗುರಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಗಳು ಹಲವಾರು ಯೋಜನೆಗಳ ಮೂಲಕ ಸಮನ್ವಯತೆಯಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ ಎಂದು ತಿಳಿಸಿದರು.

ಶಿಶು ಅಭಿವೃದ್ಧಿ ಯೋಜನೆ ಅಧಿಕಾರಿಗಳಾದ ಜಯಶ್ರೀ, ಕೊಪ್ಪಳ ಕಿಮ್ಸ್ ಮತ್ತು ಜಿಲ್ಲಾ ಆಸ್ಪತ್ರೆಯ ವೈದ್ಯರಾದ ಡಾ. ಸುರೇಖಾ ಅವರು ವಿದ್ಯಾರ್ಥಿನಿಯರಿಗೆ ವಿವರವಾಗಿ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಆರ್.ಕೆ.ಎಸ್.ಕೆ ಪ್ರೋಗ್ರಾಮ್ ಕೋರ್ಡಿನೇಟರ್ ಮಂಜುನಾಥ್, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಗಂಗಮ್ಮ, ಜಿಲ್ಲಾ ಮಹಿಳಾ ಸಬಲೀಕರಣ ಘಟಕದ ಫಾತಿಮಾ, ಸಖಿ ಘಟಕದ ಆಡಳಿತಾಧಿಕಾರಿ ಯಮುನಾ, ಸ್ನೇಹ ಕ್ಲಿನಿಕ್ ಆಪ್ತ ಸಮಾಲೋಚಕರು ಸ್ವರೂಪರಾಣಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ
ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

# ಅನಂತಮೂರ್ತಿ ಪತ್ರ



ಕನ್ನಡ ವಿಶ್ವವಿದ್ಯಾಲಯದೊಂದಿಗೆ ಯು.ಆರ್. ಅನಂತಮೂರ್ತಿಯವರ ಸಂಬಂಧ ಹಲವು ತೆರನಾಗಿತ್ತು. ಅವರು ಇಲ್ಲಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತ, ತಮ್ಮ ಚಿಂತನೆಗಳನ್ನ ಹಂಚಿಕೊಳ್ಳುತ್ತಿದ್ದರು. ಅವರು ಎನ್‌ಬಿಟಿಯ ಅಧ್ಯಕ್ಷರಾದ ಬಳಿಕ, ಟಾಗೂರರ 'ಗೋರಾ' ಕಾದಂಬರಿಗೆ ಶತಮಾನ ತುಂಬಿತ್ತು. ಅದರ ಮೊದಲನೇ ಕಾರ್ಯಕ್ರಮವನ್ನು ಹಂಪಿಯಲ್ಲಿ ಏರ್ಪಡಿಸಿದರು. ಮುಂದೆ ಕನ್ನಡ ವಿಶ್ವವಿದ್ಯಾಲಯದ ಘಟಿಕೋತ್ಸವ ಭಾಷಣ ಮಾಡುವ ಅವಕಾಶ ಬಂದಾಗ (1998), ಕನ್ನಡದಲ್ಲಿ ಜ್ಞಾನಸೃಷ್ಟಿ ಮಾಡುವ ಕುರಿತು ಕೆಲವು ಪ್ರಮೇಯಗಳನ್ನು ಮಂಡಿಸಿದರು; ಕನ್ನಡ ವಿಶ್ವವಿದ್ಯಾಲಯವು 'ನಾಡೋಜ' ಗೌರವ ಪದವಿಯನ್ನು ಅವರಿಗೆ (2008) ನೀಡಿತು. ಕನ್ನಡ ವಿಶ್ವವಿದ್ಯಾಲಯ ಇಕ್ಕಟ್ಟಿಗೆ ಸಿಲುಕಿದಾಗ ಧಾವಿಸಿ ಬಂದು ನಮ್ಮ ಜತೆಗೆ ನಿಂತರು. ಅದು ಅವರು ನಾಡೋಜರಾಗಿ ತಮ್ಮ ರುಣ ತೀರಿಸಿದ ಪರಿಯಾಗಿತ್ತು.

ಈ ವಿದ್ಯಮಾನ ಸಂಭವಿಸಿದ್ದು 2010ನೇ ಇಸವಿಯಲ್ಲಿ. ಯಡಿಯೂರಪ್ಪನವರು ಮುಖ್ಯಮಂತ್ರಿಗಳೂ, ಅವರ ಮಂತ್ರಿಮಂಡಲದಲ್ಲಿ ಜನಾರ್ದನ ರೆಡ್ಡಿಯವರು ಪ್ರಭಾವಶಾಲಿ ಮಂತ್ರಿಗಳೂ ಆಗಿದ್ದ ಕಾಲವದು. ಆ ಹೊತ್ತಿಗೆ ವಿಜಯನಗರ ದೊರೆಯಾಗಿದ್ದ ಶ್ರೀಕೃಷ್ಣದೇವರಾಯನು ಪಟ್ಟಾಭಿಷೇಕದ 500ನೇ ವರ್ಷ ಪೂರೈಸಿತ್ತು. ಇದರ ಹಿನ್ನೆಲೆಯಲ್ಲಿ ಸರ್ಕಾರ ಅನೇಕ ಕಾರ್ಯಕ್ರಮ ಹಮ್ಮಿಕೊಂಡಿತು. ಅವುಗಳಲ್ಲಿ ವಿಶ್ವವಿದ್ಯಾಲಯದ 80 ಎಕರೆಯಷ್ಟು ಭೂಮಿಯನ್ನು 'ವಿಜಯನಗರ ಪುನಶ್ಚೇತನ ಟ್ರಸ್ಟಿ'ಗೆ ವರ್ಗಾಯಿಸಿ, ಅದರಲ್ಲಿ ಕೃಷ್ಣದೇವರಾಯ ಪುತ್ಥಳಿ ಸ್ಥಾಪಿಸಿ, ದೆಹಲಿಯ ಅಕ್ಷರಧಾಮದ ಗುಡಿಯ ಮಾದರಿಯಲ್ಲಿ ಥೀಮ್‌ಪಾರ್ಕನ್ನು ನಿರ್ಮಾಣ ಮಾಡುವುದೂ ಒಂದು. ಇದಕ್ಕಾಗಿ ಎಲ್.ಕೆ. ಅಡ್ವಾಣಿಯವರಿಂದ ಶಿಲಾನ್ಯಾಸವನ್ನು ನೆರವೇರಿಸಿತು. ಇದು ವಿಶ್ವವಿದ್ಯಾಲಯದ ನಮಗೆ ಒಪ್ಪಿತವಾಗಲಿಲ್ಲ. ಒಟ್ಟಿಗೆ ನಿಂತು ಪ್ರತಿರೋಧಿಸಿದೆವು. ಚಂದ್ರಶೇಖರ ಕಂಬಾರರು, ಎಂ.ಎಂ. ಕಲಬುರ್ಗಿಯವರು, ಎಚ್.ಜೆ.ಲಕ್ಕಪ್ಪಗೌಡರು, ವಿವೇಕರೈಯವರು ನಮ್ಮ ಬೆನ್ನಿಗೆ ನಿಂತರು. ಎಂ. ಚಿದಾನಂದಮೂರ್ತಿ ಅವರನ್ನು ಹೊರತುಪಡಿಸಿ, ಜಿ.ಎಸ್.ಶಿವರುದ್ರಪ್ಪ, ಚೆನ್ನವೀರ ಕಣವಿ, ಪಾಟೀಲ ಪುಟ್ಟಪ್ಪ, ಜಿ. ರಾಮಕೃಷ್ಣ, ಜಿ.ಕೆ.ಗೋವಿಂದರಾವ್, ಅಲ್ಲಮಪ್ರಭು ಬೆಟ್ಟದೂರು, ಕೆ. ಮರುಳಸಿದ್ಧಪ್ಪ, ಸಾರಾ ಅಬೂಬಕರ್, ನಾ. ಡಿಸೋಜಾ, ಪುರುಷೋತ್ತಮ ಬಿಳಿಮಲೆ, ನಲ್ಲೂರು ಪ್ರಸಾದ್, ಬರಗೂರು ರಾಮಚಂದ್ರಪ್ಪ, ಎಸ್.ಎಲ್.ಭೈರಪ್ಪ, ಕಡಿದಾಳು ಶಾಮಣ್ಣ, ಕುಂವೀ, ಕೆ.ವಿ.ನಾರಾಯಣ, ದೇವನೂರ ಮಹಾದೇವ, ಗಿರಡ್ಡಿ ಗೋವಿಂದರಾಜ, ಜಿ.ಎಸ್. ಆಮೂರ, ಡಿ.ದುರ್ಗಾದಾಸ, ಎಂ.ಡಿ. ಒಕ್ಕುಂದ, ವಾಮನ ಬೇಂದ್ರೆ, ವೀಣಾ ಶಾಂತೇಶ್ವರ, ಚಂಪಾ, ಗೀತಾ ನಾಗಭೂಷಣ, ಶೂದ್ರ ಶ್ರೀನಿವಾಸ್, ದಿನೇಶ್ ಅಮೀನಮಟ್ಟು ಮುಂತಾದ ನಾಡಿನ ಲೇಖಕರೂ ಚಿಂತಕರೂ ದನಿಗೂಡಿಸಿದರು. ನಾಡಿನ ಬಹುತೇಕ ಪತ್ರಿಕೆಗಳು ಸಂಪಾದಕೀಯ ಬರೆದು ಖಂಡಿಸಿದವು. 'ಪ್ರಜಾವಾಣಿ' ಪತ್ರಿಕೆ ನಿರ್ಣಾಯಕ ಪಾತ್ರ ವಹಿಸಿತು. ಎಪ್ಪತ್ತೈದರಷ್ಟು ಸ್ಥಳೀಯರ ಜನಪರ ಸಂಘಟನೆಗಳು ತಿಂಗಳು ಕಾಲ ಮುಷ್ಕರ ಮಾಡಿದವು. 187 ಜನರು ಬಂಧನಕ್ಕೆ ಒಳಗಾದರು. ಗೋಕಾಕ್ ಚಳುವಳಿ ಬಿಟ್ಟರೆ, ಕನ್ನಡಚಿಂತಕರು ಈ ಬಗೆಯಲ್ಲಿ ಒಗ್ಗಟ್ಟು ತೋರಿದ್ದು ಇದೇ ಸನ್ನಿವೇಶದಲ್ಲಿ ಎಂದು ಕಾಣುತ್ತದೆ. ಕರ್ನಾಟಕದ ಎಲ್ಲ ಕಡೆಯಿಂದ ಕನ್ನಡ ವಿಶ್ವವಿದ್ಯಾಲಯದ ಈ ಭೂಹೋರಾಟಕ್ಕೆ ಸಿಕ್ಕ ಬೆಂಬಲ ಮತ್ತು ಸಿಕ್ಕ ವಿಜಯವನ್ನು ನೆನೆದರೆ, ಹೃದಯ ತುಂಬಿಬರುತ್ತದೆ.

ಹೋರಾಟದಲ್ಲಿ ಅನಂತಮೂರ್ತಿಯವರು ವಹಿಸಿದ ಪಾತ್ರ ಗಣನೀಯವಾಗಿತ್ತು. ಭೂಮಿ ಪರಭಾರೆಯಾದ ಕೂಡಲೇ ಅವರು ಬೆಂಗಳೂರಿನ ಟೌನ್‌ಹಾಲಿನಲ್ಲಿ ಲೇಖಕರು ಕಲಾವಿದರು ಕೂಡಿದ ಸಭೆಯಲ್ಲಿ ಸರ್ಕಾರದ ಕ್ರಮವನ್ನು ವಿರೋಧಿಸಿ ಧರಣಿ ಮಾಡಿದರು. ಭೂಹೋರಾಟ ನಡೆದ ಇಡೀ ತಿಂಗಳು ಕಾಲ ಅವರು ನಿರಂತರ ನಮ್ಮ ಸಂಪರ್ಕದಲ್ಲಿದ್ದರು. ಒಮ್ಮೆ ಉನ್ನತ ಶಿಕ್ಷಣಮಂತ್ರಿಗಳಾದ ಲಿಂಬಾವಳಿಯವರು, ಭೂಮಿ ಹಸ್ತಾಂತರ ವಿರೋಧಿಸುವ ಶಿಕ್ಷಕರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಹೇಳಿಕೆ ಮಾಡಿದರು. ಅದಕ್ಕೆ ಅನಂತಮೂರ್ತಿಯವರು ಕೂಡಲೆ ವಾಚಕರವಾಣಿಯಲ್ಲಿ (1.3.10) 'ಹಾಗೆ ಶಿಕ್ಷೆ ಮಾಡುವ ಅಧಿಕಾರ ಶಿಕ್ಷಣಮಂತ್ರಿಗಳಿಗಿಲ್ಲ; ಈ ಕೆಲಸವನ್ನು ಕುಲಪತಿ ಮತ್ತು ರಾಜ್ಯಪಾಲರು ಮಾತ್ರ ಮಾಡಬಹುದು. ವಿಶ್ವ ವಿದ್ಯಾಲಯದ ಅಧ್ಯಾಪಕ ಸಂಘದ ಅಧ್ಯಕ್ಷನಾಗಿದ್ದ ಮತ್ತು ವಿಶ್ವ ವಿದ್ಯಾಲಯ ವೊಂದರ ಕುಲಪತಿಯಾಗಿದ್ದ ಅನುಭವದಲ್ಲಿ ಈ ಮಾತನ್ನು ಬರೆದಿದ್ದೇನೆ. ಹಂಪಿ ವಿಶ್ವವಿದ್ಯಾಲಯದ ಅಧ್ಯಾಪಕರ ಹೋರಾಟಕ್ಕೆ ನನ್ನ ಬೆಂಬಲವಿದೆ. ಮಂತ್ರಿಗಳ ಮಾತಿಗೆ ಯಾರೂ ಹೆದರಬೇಕಿಲ್ಲ' ಎಂದು ಪತ್ರ ಬರೆದರು. ಈ ಪತ್ರ ಬರೆಯುವ ವಾರದ ಹಿಂದೆ 'ಕನ್ನಡದಿಂದ ಕಸಿದ ಜಾಗ ವಾಪಸ್ ಸಿಗಲಿ' ಎಂಬ ಬಹಿರಂಗ ಪತ್ರವನ್ನು ಕುಲಪತಿಗಳಿಗೆ (26.2.10 ಪ್ರಜಾವಾಣಿ) ಬರೆದಿದ್ದರು. ಅದೊಂದು ಚಾರಿತ್ರಿಕ ಮಹತ್ವದ ಪತ್ರವಾಗಿದ್ದು, ಅದರಲ್ಲಿ ಅವರು ತಮ್ಮ ಕನಸನ್ನು ಹಂಚಿಕೊಂಡರು. ಪತ್ರದ ಪಾಠ ಹೀಗಿದೆ:



ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು

Hampi Times E-paper
SCAN AND READ

"ಭಾಷೆಗಳ ಹೆಸರಿನಲ್ಲಿ ವಿಶ್ವವಿದ್ಯಾಲಯಗಳನ್ನು ಸೃಷ್ಟಿಸುವುದು ಸಮರ್ಪಕವಲ್ಲ.

ತೆಲುಗು ವಿಶ್ವವಿದ್ಯಾಲಯ ನನಗೆ ಗೊತ್ತಿರುವಂತೆ ಅರ್ಹರನ್ನು ಹುಡುಕಿ ಪ್ರಶಸ್ತಿಗಳಿಗೆ ಆಯ್ಕೆ ಮಾಡುವ ಕೆಲಸಕ್ಕೆ ಸೀಮಿತವಾಗಿದೆ. ಕೇರಳದಲ್ಲಿ ಸಂಸ್ಕೃತ ವಿಶ್ವವಿದ್ಯಾಲಯ ಮಾಡಲು ಹೊರಟಾಗ ನಾನದನ್ನು ವಿರೋಧಿಸಿದ್ದೆ. ನಾನು ಊಹಿಸಿದಂತೆಯೇ ಅದು ಕಾಮರ್ಸ್ ಕಲಿಸಿ ಉದ್ಯೋಗ ಸೃಷ್ಟಿಸುವ ಅಂಗಡಿಯಾಯಿತು. ನೆವಕ್ಕೆ ಸಂಸ್ಕೃತ ಅಲ್ಲಿ ಇತ್ತು. ಹಂಪಿಯ ಕನ್ನಡ ವಿಶ್ವವಿದ್ಯಾಲಯ ಮಾತ್ರ ಇದಕ್ಕೆ ಹೊರತಾಗಿತ್ತು. ಇದಕ್ಕೆ ಕಾರಣ ಕವಿ ಕಂಬಾರರು ಮೊದಲ ಕುಲಪತಿಯಾಗಿ ಆಯ್ಕೆಯಾದದ್ದು. ಆಗಿನ ಸರ್ಕಾರ ಅವರಿಗೆ ಬೆಂಬಲವಾಗಿ ನಿಂತದ್ದು. ಕಂಬಾರರು 'ರಿಸರ್ಚ್'ನ ಕಲ್ಪನೆಯನ್ನೇ ಬದಲಿಸಿ ಅದನ್ನು ದೇಸಿಗೊಳಿಸಿದರು.

ಈ ಕೆಲಸ ಮುಂದುವರೆಯ ಬೇಕಾದ್ದು. ಅದಕ್ಕೀಗ ವಿಘ್ನ ಒದಗಿದೆ. ಭೂತಕಾಲವನ್ನು ಪುನರುಜ್ಜೀವಿಸುವ ಆಶಯ ಇಟ್ಟುಕೊಂಡಿದ್ದೇವೆಂದು ಹೇಳಿ ಕೊಳ್ಳುವ ಒಂದು ಟ್ರಸ್ಟಿಗೆ 80 ಎಕರೆ ಭೂಮಿಯನ್ನು ವರ್ಗಾಯಿಸಿದೆ. ಇದು ಅನೈತಿಕ ಮಾತ್ರವಲ್ಲ; ಅಸಿಂಧು ಕೂಡಾ. ವಿಶ್ವವಿದ್ಯಾಲಯದ ಹುಟ್ಟಿನ ಆಶಯಕ್ಕೇ ವಿರೋಧವಾದ್ದು. ಭೂತಕಾಲವನ್ನು ಪುನರುಜ್ಜೀವನಗೊಳಿಸುವುದು ಅಸಾಧ್ಯ ಮಾತ್ರವಲ್ಲ, ಅಸಾಧು ಕೂಡ. ಕೊನೆಗೆ ಭೂತಕಾಲ ಕೃಷ್ಣದೇವರಾಯನ ಕಂಚಿನ ಪ್ರತಿಮೆ ಮಾತ್ರವಾದೀತು. ರಾಜಕುಮಾರ್ ತಮ್ಮ ಸಿನಿಮಾದಲ್ಲಿ ಅದ್ಭುತವೆಂಬಂತೆ ಕೃಷ್ಣದೇವರಾಯ ಈ ಕಾಲಕ್ಕೆ ಒದಗುವಂತೆ ಮಾಡಿದರು. ನಮಗೆ ಅಷ್ಟು ಸಾಕು.

ಕೃಷ್ಣದೇವರಾಯನ ಸಿಂಹಾಸನದ 500 ವರ್ಷಗಳ ಆಚರಣೆಗೆ ಅದೆಷ್ಟು ಕೋಟಿಯೋ ಖರ್ಚಾಯಿತಂತೆ. ಕೃಷ್ಣದೇವರಾಯನ ಕಾಲದಲ್ಲೇ ಇಷ್ಟೊಂದು ಕೋಟಿ ಖರ್ಚಿನಲ್ಲಿ ಸಿಂಹಾಸನವನ್ನು ಅವನು ಹತ್ತಿದ್ದರೆ, ಖಂಡಿತ ಆ ಕಾಲದ ನಮ್ಮ ಪುರಂದರದಾಸರು ಕರೆದರೂ ಆ ಸಮಾರಂಭಕ್ಕೆ ಹೋಗುತ್ತಿರಲಿಲ್ಲ. ಅವರು ಹಾಡಿದ್ದಾರಲ್ಲವೇ 'ಉತ್ತಮ ಪ್ರಭುತ್ವ ಲೊಳಲೊಟ್ಟೆ'. ಪ್ರಭುತ್ವ ಉತ್ತಮವಾಗಿದ್ದರೂ ಲೊಳಲೊಟ್ಟೆ. ಉತ್ತಮವಾದೀತೆಂಬ ಭರವಸೆಯೂ ಲೊಳಲೊಟ್ಟೆ. ರಾಜಕೀಯದ ಬದಲಾವಣೆ ಹೃದಯದೊಳಗಿನ ಸಂಸ್ಕಾರವೂ ಆಗದ ಹೊರತು, ತೋರಿಕೆಗೆ ಇರುವ ವಿಜೃಂಭಣೆ ಲೊಳಲೊಟ್ಟೆ ಎನ್ನುವ ನಮ್ಮ ವಿಜಯನಗರ ವೈಭವದ ಕಾಲದ ದಾಸರಿಗೂ, ತನ್ನ ಕಾಲದ ಜರ್ಮನಿಯ ಪ್ರಭುತ್ವವೇ ಅಂತಿಮ ವೃದ್ಧಿಯ ಸ್ಥಿತಿ ಎಂದು ತಿಳಿದಿದ್ದ ಪಾಶ್ಚಾತ್ಯ ಹೆಗಲ್‌ಗೂ ಇರುವ ವ್ಯತ್ಯಾಸ ಗಮನಿಸಬೇಕು.

ಕನ್ನಡದಲ್ಲಿ ಜ್ಞಾನದ ಸಂವಹನೆ ಚೆನ್ನಾಗಿ ನಡೆದಿದೆ; ಈಗ ಜ್ಞಾನದ ಸೃಷ್ಟಿಯೂ ಕನ್ನಡದಲ್ಲಿ ನಡೆಯಬೇಕೆಂಬುದು ನಮ್ಮ ಆಶಯ. ಇಂಗ್ಲಿಷಿನಲ್ಲಿ ಹಲವರು ಜ್ಞಾನದ ಹೊಸ ಆವಿಷ್ಕಾರಗಳನ್ನು ಮಾಡಿದ್ದಾರೆ. ಡಾರ್ವಿನ್‌ನಂತಹವರು, ಡೇನಿಷ್‌ನಂತಹ ಪುಟ್ಟಭಾಷೆಯಲ್ಲಿ ಕೆರ್ಕೆಗಾರ್ಡ್‌ನಂಥವರು ಹೊಸ ತಿಳಿವನ್ನು ಹುಟ್ಟಿಸುವ ಕೆಲಸ ಮಾಡಿದ್ದಾರೆ. ಕನ್ನಡದಲ್ಲಿ ನಮ್ಮ ವಚನಕಾರರು, ಮುಖ್ಯವಾಗಿ ಬಸವ ಅಲ್ಲಮನಂತಹವರು, ಹೊಸ ಆಲೋಚನೆಗಳನ್ನು ಜಗತ್ತಿಗೆ ಕೊಟ್ಟಿದ್ದಾರೆ. ಕನ್ನಡದಲ್ಲೂ ಈ ಕಾಲದ ಅಗತ್ಯಕ್ಕೆ ತಕ್ಕಂತೆ ಇಡೀ ಜಗತ್ತೇ ಆಲಿಸಬೇಕಾದ(ಬಹುದಾದ), ವಿಚಾರಗಳು ಹುಟ್ಟಿರಬೇಕು. ಕನ್ನಡ ವಿಶ್ವವಿದ್ಯಾಲಯ ಬೇರೆ ಕನ್ನಡ ಇಲಾಖೆಗಳಂತಲ್ಲದೆ ಅನನ್ಯವಾಗಲು ಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ಹೊಸ ವಿಚಾರದ ಹುಟ್ಟಿನ ಮಾಧ್ಯಮವಾಗಬೇಕು.

ಇವತ್ತಿನ ವಾಸ್ತವ ಮರೆಯದಂತೆ ನನ್ನೆರಡು ಸೂಚನೆಗಳು ಇಲ್ಲಿವೆ. ಬುದ್ಧಿವಂತ ಮಕ್ಕಳೆಲ್ಲ ಎಂ.ಬಿ.ಬಿ.ಎಸ್ ಮಾಡಲು ಹಾತೊರೆಯುತ್ತಾರೆ. ನನಗೆ ತಿಳಿದಂತೆ ಹಿಂದೆ ರಷ್ಯನ್ ಕಲಿತು ಸೋವಿಯತ್ ದೇಶಗಳಲ್ಲಿ ಮೆಡಿಸಿನ್ ಡಿಗ್ರಿ ಪಡೆಯುತ್ತಿದ್ದರು. ಕನ್ನಡಕ್ಕೆ ಬಲವೂ ಆತ್ಮಗೌರವವೂ ಬರಲು ಕನ್ನಡ ವಿಶ್ವವಿದ್ಯಾಲಯ ಪಾಶ್ಚಾತ್ಯ ಮೆಡಿಸನ್ ಅನ್ನು ಕನ್ನಡದಲ್ಲಿ ಕಲಿಸಲು ಮುಂದಾಗಲಿ. ಇದರಲ್ಲಿ ಪ್ರವೇಶ ಪಡೆಯುವವರಿಗೆಲ್ಲ ಜ್ಞಾನದ ಗ್ರಹಿಕೆಗೆ ಅಗತ್ಯವಾದಷ್ಟು ಇಂಗ್ಲಿಷ್ ಕೂಡ ಗೊತ್ತಿರಬೇಕು. ಪಾಶ್ಚಾತ್ಯ ವೈದ್ಯಶಾಸ್ತ್ರ ಕಲಿಯುವ ಈ ವಿದ್ಯಾರ್ಥಿಗಳೂ ನಮ್ಮ ದೇಸಿ ಪದ್ಧತಿಯ ಎಲ್ಲ ಔಷಧೋಪಚಾರಗಳನ್ನು ವೈಜ್ಞಾನಿಕವಾಗಿ ಸಂಶೋಧನೆಗೆ ಒಲಪಡಿಸಿ ಪರೀಕ್ಷಿಸಬೇಕು ಜ್ಞಾನಸೃಷ್ಟಿಯಾಗುವ ಬಗೆಗಳಲ್ಲಿ ಇದೂ ಒಂದು.

ಮುಖ್ಯವಾಗಿ ಇಲ್ಲೊಂದು ಸೂಚನೆ. ಕನ್ನಡೇತರ ದೇಶದ ಯಾವ ವಿದ್ಯಾರ್ಥಿಯಾಗಲಿ, ಕನ್ನಡ ಕಲಿತು ಪ್ರವೇಶ ಬಯಸಿದರೆ, ಅರ್ಹತೆಯ ಆಧಾರದ ಮೇಲೆ ಅವರಿಗೂ ಇಲ್ಲಿ ಪ್ರವೇಶ ಸಿಗಬೇಕು. ತನ್ನ ಪರಿಧಿಗೆ ಸೀಮಿತವಾದ ಕನ್ನಡ ಆಗ ಚಲಿಸುವ ಭಾಷೆಯೂ ಆಗುತ್ತದೆ. ವಿಜ್ಞಾನಕ್ಕೆ ಸಂಬಂಧಿಸಿದಂತೆ ಇನ್ನೊಂದು ಸೂಚನೆ. ವಿಜ್ಞಾನಕ್ಕೊಂದು ಚರಿತ್ರೆಯಿದೆ. ಅದರ ಹಿಂದೊಂದು ತಾತ್ವಿಕ ದರ್ಶನವೂ ಇದೆ. ಇದು ಪಾಶ್ಚಾತ್ಯ ಮಾತ್ರವಲ್ಲ, ಜಾಗತಿಕವಾದ್ದು. ಈ ವಿಷಯದಲ್ಲಿ ಆಳವಾದ ಸಂಶೋಧನೆಯನ್ನು ಕನ್ನಡದಲ್ಲಿ ನಡೆಸುವಂತೆ ಆಗಬೇಕು. ಗತಿಸಿದ್ದ ವಿಜ್ಞಾನಿ ಸಿ.ಎಸ್.ಶೇಷಾದ್ರಿಯವರು ನಾವು ಕೇವಲ ಸತ್ಯವೆಂದು ಒಪ್ಪಿಕೊಳ್ಳುವ ಎಷ್ಟೊ ಪಾಶ್ಚಾತ್ಯ ವಿಜ್ಞಾನದ ಗ್ರಹಿಕೆಗಳ ಹಿಂದೆ ಅವರ ಮತಧರ್ಮಗಳೂ ಕಾಲದ ಚಲನೆ ಸರಳ ರೇಖಾತ್ಮಕವೆಂಬ ಈ ಮತಧರ್ಮಗಳ ಗ್ರಹಿಕೆಯೂ ಕೆಲಸ ಮಾಡುತ್ತವೆಯೆಂದು ಭಾವಿಸಿದ್ದರು. ನಾವಿದನ್ನು ಪರೀಕ್ಷಿಸಿದಲ್ಲಿ ಪ್ರಾಯಶಃ ಮುಂದಿನ ಯುಗಕ್ಕೆ ಬೇಕಾದ ಪರ್ಯಾಯ ತಂತ್ರಜ್ಞಾನವನ್ನು ಹುಟ್ಟು ಹಾಕುವ ವಿಜ್ಞಾನ ನಮ್ಮಲ್ಲಿ ಬೆಳೆಯಬಹುದು. ಹಾಗೆ ನೋಡಿದರೆ ವಿಜ್ಞಾನದ ಅತಿ ಸಂಕೀರ್ಣವಾದ ಭಾಗವಾದ ಗಣಿತಶಾಸ್ತ್ರಕ್ಕೆ ಬಹುದೊಡ್ಡ ಕೊಡುಗೆಗಳನ್ನು ನೀಡಿದ್ದು ಪೂರ್ವದ ದೇಶಗಳೇ. ಈ ಪೂರ್ವದ ದೇಶಗಳ ಪ್ರಾಚೀನ ಗಣಿತಜ್ಞರು ಇಂಗ್ಲಿಷ್‌ನಲ್ಲೇನೂ ಬರೆಯಲಿಲ್ಲ. ಅವರು ತಮಗೆ ತಿಳಿದಿದ್ದ ಸಂಸ್ಕೃತ ಅರಾಬಿಕ್‌ನಂತಹ ಭಾಷೆಗಳಲ್ಲೇ ಗಣಿತದ ಸಂಕೀರ್ಣ ತತ್ವಗಳನ್ನು ಮಂಡಿಸಿದ್ದರು ಎಂಬುದು ನಮಗೆ ನೆನಪಿರಬೇಕು.

ಪಾಶ್ಚಾತ್ಯ ವಿಜ್ಞಾನದ ಗ್ರಹಿಕೆ ವಿಧಾನಗಳಿಗೆ ಪರ್ಯಾಯವನ್ನು ಸೃಷ್ಟಿಸುವುದಕ್ಕೆ ನಮ್ಮ ಗ್ರಹಿಕೆಯ ಭಾಷೆಯೂ ಬದಲಾಗಬೇಕಿರುವ ಅಗತ್ಯವನ್ನು ಮನಗಂಡರೆ, ಕನ್ನಡದಲ್ಲಿ ಜ್ಞಾನಸೃಷ್ಟಿಯ ಅಗತ್ಯವೂ ಅನಿವಾರ್ಯತೆಯೂ ತಿಳಿಯುತ್ತದೆ. ಸಾಂಸ್ಕೃತಿಕ ಏಕರೂಪೀಕರಣವನ್ನು ಹೇರುತ್ತಿರುವ ಜಾಗತೀಕರಣದ ಈ ದಿನಗಳಲ್ಲಿ ಪರ್ಯಾಯದ ಸೃಷ್ಟಿಗೆ ನಮ್ಮ ಅನನ್ಯತೆಗಳನ್ನು ಪುನರಾವಿಷ್ಕರಿಸುವ ಅಗತ್ಯವಿದೆ. ಚೀನಾದಲ್ಲಿ ಮಾವೋ ಸಾಂಸ್ಕೃತಿಕ ಕ್ರಾಂತಿಯ ಮೂಲಕ ಪಶ್ಚಿಮಕ್ಕಿಂತ ಭಿನ್ನವಾದ ತಂತ್ರಜ್ಞಾನವನ್ನೊಂದನ್ನು ಬೆಳೆಸಲು ಪ್ರಯತ್ನಿಸಿದರು. ಆದರೆ ಇದು ಪರ್ಯಾಯ ತಂತ್ರಜ್ಞಾನವಾಗಿರಲಿಲ್ಲ. ಬದಲಿಗೆ ಪಶ್ಚಿಮದ ತಂತ್ರಜ್ಞಾನ ಸಂಸ್ಕೃತಿಯನ್ನೇ ಶ್ರೇಷ್ಠವೆಂದು ಒಪ್ಪಿಕೊಂಡು ಆ ಹಂತವನ್ನು ತಲುಪುವುದಕ್ಕೆ ಅಗತ್ಯವಿರುವ ಮಧ್ಯಮ ತಂತ್ರಜ್ಞಾನವೊಂದನ್ನು ರೂಪಿಸುವ ಪ್ರಯತ್ನ ಅದಾಗಿತ್ತು. ನಮಗೆ ಬೇಕಿರುವುದು ಇಂಥ ಮಧ್ಯಮ ತಂತ್ರಜ್ಞಾನವಲ್ಲ. ನಮಗೆ ಬೇಕಿರುವುದು ಭೂಮಿಯನ್ನು ಉಳಿಸಿ ಬೆಳೆಸುವುದಕ್ಕೆ ಅಗತ್ಯವಿರುವ ತಂತ್ರಜ್ಞಾನ. ಭೂಮಿಯ ವಾತಾವರಣದ ಶಾಖ ಏರುತ್ತ ಇರುವ ನಮ್ಮ ಆತಂಕದ ಕಾಲದಲ್ಲಿ ಪರ್ಯಾಯಗಳನ್ನು ಚಿಂತಿಸುವ ಗ್ರಹಿಸುವ ಮತ್ತು ಸಾಕಾರಗೊಳಿಸುವ ಸಂಶೋಧನೆಯ ದಾರಿಯಲ್ಲಿ ನಮ್ಮ ಕನ್ನಡ ವಿಶ್ವವಿದ್ಯಾಲಯವೂ ಹೆಜ್ಜೆಗಳನ್ನಿಡಬೇಕು. ಇಗಾಗಲೇ ಇರುವ ಕನ್ನಡ ಭಾಷಾತಜ್ಞರು ಈ ದಿಕ್ಕಿನಲ್ಲಿ ಕನ್ನಡ ಭಾಷೆ ಸಜ್ಜಾಗುವಂತೆ ಬೆಳೆಸಬೇಕು. ಹೀಗೆ ಕನ್ನಡ ಬೆಳೆದರೆ ಈ ಭಾಷೆಯನ್ನು ಇಂದಿಗೂ ಉಳಿಸಿಕೊಂಡಿರುವ ದೇಶದ ಬಡಬಗ್ಗರಿಗೆ ಕನ್ನಡ ಧೀಮಂತ ವಿಶ್ವಭಾಷೆಯಾಗಿ ಒದಗಿದಂತಾಗುತ್ತದೆ.

ವಿಶ್ವವಿದ್ಯಾಲಯದ ನೆಲವನ್ನು ಪರಭಾರೆ ಮಾಡಲು ಯಾವ ಸಂದಿಗ್ಧದಿಂದಲೊ ಒಪ್ಪಿರುವಂತೆ ಕಾಣುವ ಕುಲಪತಿ, ರಾಜ್ಯಪಾಲರಿಗೆ ಬರೆಯುವ ಧೈರ್ಯ ಮಾಡಿ, ಈ ಕನಸಿನ ಭೂಮಿಕೆಯಾಗಿ ನೆಲವನ್ನು ಉಳಿಸಿಕೊಳ್ಳಬೇಕೆಂದು ಅವರಿಂದ ನಾಡೋಜ ಪಡೆದ ನಾನು ಕೋರುತ್ತೇನೆ- ಯು.ಆರ್.ಅನಂತಮೂರ್ತಿ"

ಕರ್ನಾಟಕದ ಸಮಸ್ತ ಪ್ರಜ್ಞಾವಂತರ ಬೆಂಬಲದಿಂದ ಭೂಹೋರಾಟ ಯಶಸ್ಸನ್ನು ಕಂಡಿತು. ಸದನದಲ್ಲಿ ಮುಖ್ಯಮಂತ್ರಿಯವರು ವಶಪಡಿಸಿಕೊಂಡಿದ್ದ ಭೂಮಿಯನ್ನು ವಿಶ್ವವಿದ್ಯಾಲಯಕ್ಕೆ ಮರಳಿಸುವ ಹೇಳಿಕೆ ನೀಡಿದರು. 'ಪ್ರಜಾವಾಣಿ'ಯು ಈ ಘಟನೆಯನ್ನು 'ಕನ್ನಡದ ನೆಲ ಕನ್ನಡಕ್ಕೆ' ಎಂದು ತಲೆಬರೆಹದಲ್ಲಿ ಪ್ರಕಟಿಸಿತು. ಇದಾದ ಮೇಲೆ ವಿಶ್ವವಿದ್ಯಾಲಯ 'ಕನ್ನಡನಾಡು ಮತ್ತು ಕನ್ನಡ ವಿಶ್ವವಿದ್ಯಾಲಯದ ಮನ್ನೋಟ' ಎಂಬ ವಿಚಾರ ಸಂಕಿರಣ ಹಮ್ಮಿಕೊಂಡಿತು. ಉದ್ಘಾಟನೆಗೆ ಅನಂತಮೂರ್ತಿ ಅವರನ್ನೇ ಆಹ್ವಾನಿಸಿತು- ಜತೆಗೆ ಈ ಹಿಂದಿನ ಎಲ್ಲ ಕುಲಪತಿಗಳನ್ನು. ಆಗ ಅನಂತಮೂರ್ತಿ ಅವರು ಮತ್ತೊಮ್ಮೆ ಕನ್ನಡದಲ್ಲಿ ಲೋಕದ ಎಲ್ಲ ವಿದ್ಯೆಯನ್ನು ಕಲಿಯುವಂತೆ ಅದನ್ನು ಸಜ್ಜುಗೊಳಿಸುವ ಬಗ್ಗೆ ಕನಸನ್ನು ಹಂಚಿಕೊಂಡರು. ಇಂಗ್ಲಿಶ್ ಮಾಧ್ಯಮದಲ್ಲಿ ಕಲಿತವರು ಈ ನೆಲಕ್ಕೆ ಅನಾಥರಾಗುತ್ತಾರೆ. ಇದು ಕನ್ನಡಕ್ಕೆ ಮಾತ್ರವಲ್ಲ ಎಲ್ಲ ಭಾರತೀಯ ಭಾಷೆಗಳಿಗೆ ಬಂದಿರುವ ಅಪಾಯ ಎಂದು ಹೇಳಿದರು. ಕನ್ನಡ ವಿಶ್ವವಿದ್ಯಾಲಯವು ಕನ್ನಡದಲ್ಲಿಯೇ ಒಂದು ಸಮಾಜವಿಜ್ಞಾನದ ಕೋರ್ಸನ್ನು ಮಾಡಬೇಕೆಂದೂ ಅದು ಭಾರತದಲ್ಲಿಯೇ ವಿಶಿಷ್ಟವಾದ ಪದವಿಯಾಗಿರಬೇಕೆಂದೂ ತಮ್ಮ ಆಸೆ ಹಂಚಿಕೊಂಡರು.

ಅನಂತಮೂರ್ತಿಯವರು ತಮ್ಮ ಪತ್ರದಲ್ಲಾಗಲಿ, ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾಡಿದ ಉಪನ್ಯಾಸಗಳಲ್ಲಾಗಲಿ ಪ್ರಕಟಿಸಿದ ಚಿಂತನೆಯಲ್ಲಿ ಅನೇಕ ಕಡೆ ತಾತ್ವಿಕ ಭಿನ್ನಮತ ತೋರಬಹುದು; ಪ್ರಶ್ನೆ ಎತ್ತಬಹುದು. ಆದರೆ ದೇಶಭಾಷೆಗಳು ತಮ್ಮ ನಿಜಶಕ್ತಿಯನ್ನು ಕಂಡುಕೊಳ್ಳಬೇಕೆಂಬ ಅವರ ಕನಸು ಪ್ರಾಮಾಣಿಕವಾಗಿತ್ತು. ಅವರ ಕಾಮನ್‌ಸ್ಕೂಲಿನ ಕಲ್ಪನೆಯಲ್ಲಿ, ಮಕ್ಕಳು ಎಳವೆಯಲ್ಲಿ ಮನೆಮಾತು ಇಲ್ಲವೇ ಪರಿಸರ ಭಾಷೆಯಲ್ಲೇ ಕಲಿಯಬೇಕೆಂಬ ಶಿಕ್ಷಣನೀತಿ ಮಾತ್ರವಿರಲಿಲ್ಲ, ಒಂದು ಪ್ರದೇಶದ ಎಲ್ಲ ಮಕ್ಕಳು ತರತಮಗಳಿಲ್ಲದ ಶಾಲಾ ವ್ಯವಸ್ಥೆಯಲ್ಲಿ ಕಲಿಯಬೇಕೆಂದು ಸಮಾಜವಾದಿ ಆಶಯವೂ ಇತ್ತು; ಈ ಆಶಯವು ಅತ್ಯುತ್ತಮ ಬರೆಹ ಅಥವಾ ಚಿಂತನೆ ಹುಟ್ಟುವ ಸಾಧ್ಯತೆ ಹೆಚ್ಚಿರುವುದು, ಮನೆಮಾತು ಇಲ್ಲವೇ ಪರಿಸರ ಭಾಷೆಯಲ್ಲಿ ಬರೆದಾಗಲೇ ಎಂಬ ಮೀಮಾಂಸೆಯ ವಿಸ್ತರಣೆಯೂ ಆಗಿತ್ತು. ಕೋಮುವಾದದ ವಿರುದ್ಧದ ಹೋರಾಟವು ಕನ್ನಡ ಪರವಾದ ಹೋರಾಟವೂ ಆಗಿತ್ತು.

**ಕವಿ ಮನಸು**

## ಶಾಲೆ ತೆರೆದಿದೆ?...!!



ಬನ್ನಿ ಮಕ್ಕಳೇ
ಶಾಲೆ ತೆರೆದಿದೆ
ಹೊಸ ಬಟ್ಟೆ, ಪಠ್ಯ ಪುಸ್ತಕ
ಪಡೆಯಿರಿ;
ನಗುತ ಬನ್ನಿರಿ
ಹಾಲು ಕುಡಿಯಿರಿ
ಆಟ ಪಾಠದಿ ಕಲಿಯಿರಿ
ಗುರುಗಳ ಮಾತಿಗೆ
ಕಿವಿಯಾಗಿರಿ;
ಅನುಪಾಲಿಸಿ ಬದುಕನು
ಬದಲಿಸಿಕೊಳ್ಳಿರಿ;
ಹಾಡು ಹೇಳುತ ಕುಣಿದು
ಕುಪ್ಪಳಿಸಿ
ರಜೆಯ ಮರೆಯುತ
ಹೊಸ ಕಲಿಕೆಗೆ
ಮರಳಿರಿ;
ಬಿಸಿಯೂಟದ ಸವಿಯ
ಜೊತೆಗೆ
ಜ್ಞಾನದೂಟವ
ಸವಿಯಿರಿ;
ನೀತಿಕಥೆಗಳ
ಕೇಳುತ
ನೈತಿಕತೆಯನು
ಬೆಳೆಸಿಕೊಳ್ಳಿರಿ;
ಅರಿಯದ ವಿಷಯವ
ಗುರುಗಳೊಂದಿಗೆ
ಚರ್ಚಿಸಿ
ಆತ್ಮವಿಶ್ವಾಸ
ಪಡೆಯಿರಿ;
ಅಂಕಗಳಿಕೆಯ
ಹಾದಿ ತುಳಿಯದೆ
ಬದುಕಿನ ಪಾಠವ
ತಿಳಿಯಿರಿ;
ನೆಮ್ಮದಿಯ ನಾಳೆಗಾಗಿ
ಶಿಕ್ಷಣವೆಂಬ
ಮಂತ್ರವ ಸದಾ
ಪಠಿಸಿರಿ;
ತಂದೆತಾಯಿಯರ
ನಂಬಿಕೆಯ ಗೋಡೆಯ
ಬೀಳಿಸದಿರಿ;
ಗುರುಹಿರಿಯರ
ಗೌರವಿಸಿ
ತಮ್ಮ ಆತ್ಮ ಗೌರವ
ಹೆಚ್ಚಿಸಿಕೊಳ್ಳಿ;
ಬನ್ನಿ ಮಕ್ಕಳೇ
ಶಾಲೆ ತೆರೆದಿದೆ
ಬನ್ನಿರಿ??

– ಕಾಡಜ್ಜಿ ಮಂಜುನಾಥ

## ಬಾಳ ಬೆಳದಿಂಗಳು

ಬಾನಂಗಳದಿ ಹುಣ್ಣಿಮೆಯ ಚಂದಿರ
ನೋಡಲು ಬಲು ಸುಂದರ
ಬೆಳದಿಂಗಳ ಹಾಲನು ಚೆಲ್ಲಿಹನು
ನಕ್ಷತ್ರ ಪುಂಜಗಳ ಬೆಳಗಿಹನು

ಕತ್ತಲು ಕವಿದ ಬದುಕಿಗೆ
ಭಯ ಆತಂಕದ ಹಾಸಿಗೆ
ಪ್ರೀತಿ ತುಂಬಿದ ಮನಕೆ
ಬೆಳದಿಂಗಳ ಚಂದಿರನೇ ಕಾಣಿಕೆ

ನೀ ನನ್ನ ಜೊತೆಗಿರಲು
ಕೈ ಹಿಡಿದು ನಡೆಸುತಿರಲು
ಬಾಳಲಿ ಚೆಲ್ಲಿತು ಬೆಳದಿಂಗಳು
ಅರಳಿತು ಒಲವಿನಿಂದ ಕಂಗಳು

– ಚೇತನ ಭಾರ್ಗವ ಬೆಂಗಳೂರು

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

### 240 ದಿನಗಳಲ್ಲಿ 3800 ಕಿಲೋಮೀಟರ್ಗಳ ಪಾದಯಾತ್ರೆ

# ಸೃಷ್ಟಿ ಭಕ್ಷಿ ಎಂಬ ಅಸೀಮ ಸಾಹಸಿ

A child is not born as female but the society tags her as one..... ಎಂದು ಹೇಳುವ ಮೂವತ್ತರ ಹರೆಯದ ಯುವತಿ ಸೃಷ್ಟಿ ಭಕ್ಷಿ ಭಾರತದಂತಹ ದೇಶದಲ್ಲಿ ಹೆಣ್ಣು ಮಕ್ಕಳು ಅನುಭವಿಸುವ ಕಷ್ಟ, ನೋವು, ಅವಮಾನ, ನಿರಾಸೆಗಳಿಗೆ ಕಾರಣವನ್ನು ಹುಡುಕುತ್ತಾ, ಹೆಣ್ಣು ಮಕ್ಕಳ ಸ್ಥಿತಿಗತಿಗಳನ್ನು ಸುಧಾರಿಸುವ ನಿಟ್ಟಿನಲ್ಲಿ ಅವರು ಆರ್ಥಿಕ ಕ್ಷಮತೆಯನ್ನು ಹೊಂದಲು ಬಲವಾದ ಕಾರಣಗಳನ್ನು ನೀಡಿ ಎಚ್ಚರಿಸುತ್ತಾ, ಅವರಲ್ಲಿ ವಿಶ್ವಾಸ, ಭರವಸೆ ಮತ್ತು ಹುಮ್ಮಸ್ಸನ್ನು ತುಂಬುತ್ತಾ ದೇಶದ ದಕ್ಷಿಣ ತುದಿಯ ಕನ್ಯಾಕುಮಾರಿಯಿಂದ ಉತ್ತರದ ಕಾಶ್ಮೀರದವರೆಗೆ ಸುಮಾರು 3800 km ಗಳಷ್ಟು ದೂರವನ್ನು ಕೇವಲ 240 ದಿನಗಳ ಪಾದಯಾತ್ರೆಯ ಮೂಲಕ ಕ್ರಮಿಸಿ ಯಶಸ್ವಿಯಾಗಿದ್ದಾಳೆ.

ಆಕೆಯ ಹೆಸರು ಸೃಷ್ಟಿ ಭಕ್ಷಿ, ತಂದೆ ಮಿಲಿಟರಿ ಅಧಿಕಾರಿ ಮತ್ತು ತಾಯಿ ಶಿಕ್ಷಕಿ. ಓರ್ವ ಸಹೋದರಿ ಆಕೆಗೆ ಇದ್ದಾರೆ . ಸೃಷ್ಟಿ ಮತ್ತು ಆಕೆಯ ಸಹೋದರಿಗೆ ಆಕೆಯ ಪಾಲಕರು ಯಾವುದೇ ರೀತಿಯ ಕೊರತೆ ಇಲ್ಲದಂತೆ ಬೆಳೆಸಿದರು. ಒಳ್ಳೆಯ ಶಿಕ್ಷಣ ಮತ್ತು ಮನಮೆಚ್ಚಿದ ಸಂಗಾತಿಯನ್ನು ಪಡೆದ ಸೃಷ್ಟಿ ಹಾಂಕಾಂಗನ ವಿದೇಶಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಾ ಅಲ್ಲಿಯೇ ನೆಲೆಸಿದ್ದರು. ತಾನು ಕಾರ್ಯನಿರ್ವಹಿಸುವ ಕ್ಷೇತ್ರದಲ್ಲಿ ಸಾಕಷ್ಟು ವಿದೇಶೀಯರನ್ನು ಭೇಟಿಯಾಗುತ್ತಿದ್ದ ಸೃಷ್ಟಿಗೆ ಭಾರತ ದೇಶದ ಕುರಿತು ಸಹೋದ್ಯೋಗಿಗಳ ಮಾತುಕತೆಗಳಿಂದ ವ್ಯಕ್ತವಾಗುತ್ತಿದ್ದ ಭಾರತದಲ್ಲಿನ ಹೆಣ್ಣು ಮಕ್ಕಳ ಶೋಚನೀಯ ಸ್ಥಿತಿ, ಹೆಣ್ಣು ಮಕ್ಕಳ ಮೇಲೆ ಆಗುತ್ತಿರುವ ಅತ್ಯಾಚಾರ ಅನಾಚಾರಗಳು, ಇಲ್ಲಿನ ಪುರುಷ ಪ್ರಾಬಲ್ಯದ ಕುರಿತ ಮಾತುಕತೆಗಳು ಆಕೆಯನ್ನು ಸಂಕಟಕ್ಕೆ ಈಡು ಮಾಡುತ್ತಿದ್ದವು.

ಅದೊಂದು ದಿನ ಹಾಂಕಾಂಗ್ ನ ತನ್ನ ಕಚೇರಿಯಿಂದ ಮನೆಗೆ ಬಸ್ಸಿನಲ್ಲಿ ತೆರಳುತ್ತಿದ್ದ ಆಕೆಗೆ ತನ್ನ ತವರು ಮನೆಯಿಂದ ಕೇವಲ 40 ಕಿ.ಮೀ ದೂರದ ರಾಜಧಾನಿ ದೆಹಲಿಯ ರಾಷ್ಟ್ರೀಯ ಹೆದ್ದಾರಿಯ ಊರೊಂದರಲ್ಲಿ ಪತಿಯ ಮುಂದೆಯೇ ಪತ್ನಿ ಮತ್ತು 14 ವರ್ಷ ಹರೆಯದ ಮಗಳನ್ನು ಕ್ರೂರವಾಗಿ ಅತ್ಯಾಚಾರ ಮಾಡಿ ಸುಟ್ಟು ಹಾಕಿದ್ದ ವಿಷಯ ಜಾಲತಾಣಗಳಲ್ಲಿ ನೋಡಿದಾಗ ಅತ್ಯಂತ ಮನನೊಂದು ತನ್ನ ನೌಕರಿಗೆ ರಾಜೀನಾಮೆ ನೀಡಿ ಭಾರತಕ್ಕೆ ವಾಪಸಾದರು.

ಭಾರತ ದೇಶದಲ್ಲಿನ ಸಾಮಾಜಿಕ ಪರಿಸ್ಥಿತಿ ಮತ್ತು ಆಡಳಿತಾತ್ಮಕ ವ್ಯವಸ್ಥೆ ಹೆಣ್ಣು ಮಕ್ಕಳ ಸ್ಥಿತಿಗತಿಗಳನ್ನು ಸುಧಾರಿಸಲಾಗದಷ್ಟು ಕೆಟ್ಟು ಹೋಗಿದೆಯೇ, ಏನನ್ನಾದರೂ ಸುಧಾರಿಸಲು ಸಾಧ್ಯವೇ ಎಂಬ ಆಕೆಯ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕಲು ಆಕೆಯೊಂದಿಗೆ ಕೈಜೋಡಿಸಿದ್ದು ಆಕೆಯ ತಂದೆ, ತಾಯಿ ಪತಿ ಮತ್ತು ಕೆಲ ಸಮಾನ ಮನಸ್ಕ ಸ್ನೇಹಿತರು.

ದೇಶದ ಉದ್ದಕ್ಕೂ ತಿರುಗಾಡಿ ಮಹಿಳೆಯರ ಸ್ಥಿತಿಗತಿಗಳನ್ನು ಖುದ್ದಾಗಿ ಅರಿಯುವ ಆಕಾಂಕ್ಷೆ ಹೊಂದಿದ ಸೃಷ್ಟಿಗೆ ಆಕೆಯ ತಂದೆಯೇ ಖುದ್ದಾಗಿ ಪಾದಯಾತ್ರೆಯ ನೀಲನಕ್ಷೆಯನ್ನು ಸಿದ್ಧಪಡಿಸಿದರು. ಸಮಾನ ಮನಸ್ಕ ಸ್ನೇಹಿತರು ಮತ್ತು ಕುಟುಂಬದ ಎಲ್ಲರ ಸಹಾಯ, ಸಹಕಾರದೊಂದಿಗೆ ದೇಶದ ದಕ್ಷಿಣ ತುದಿಯ ಕನ್ಯಾಕುಮಾರಿಯಿಂದ ಆಕೆಯ ನಡಿಗೆ ಪ್ರಾರಂಭವಾಯಿತು. ಮೊದಲ ದಿನ ಎಂಟು ಕಿಲೋಮೀಟರ್ ನಡೆದ ಸೃಷ್ಟಿ ದಾರಿಯಲ್ಲಿ ಸಿಗುವ ಹೆಣ್ಣು ಮಕ್ಕಳನ್ನು ಭೇಟಿಯಾಗುತ್ತಾ ಮಾತನಾಡಿಸುತ್ತಾ ಮುಂದೆ ಸಾಗಿದಳು. ಮುಂದೆ ಸಾಗುತ್ತಾ ಹೋದಂತೆ ದಿನವೊಂದಕ್ಕೆ 30 ಕಿಲೋಮೀಟರ್ಗಳಷ್ಟು ನಡೆದ ಸೃಷ್ಟಿ ಅಂತಿಮವಾಗಿ 34 ಕಿಲೋ ಮೀಟರ್ ದೂರವನ್ನು ಒಂದೇ ದಿನದಲ್ಲಿ ನಡೆದುರು.ಆಕೆಯ ತಂದೆ ಮತ್ತು ತಂಡದ ಇತರ ಸದಸ್ಯರು ಹಿಂದೆ ವಾಹನ ಒಂದರಲ್ಲಿ ಆಕೆಯೊಂದಿಗೆ ಇದ್ದು ಆಕೆ ಸಾಗುವ ವಿವಿಧ ಊರುಗಳಲ್ಲಿನ ಶಾಲಾ ಕಾಲೇಜುಗಳಲ್ಲಿ ಸಂಘ ಸಂಸ್ಥೆಗಳಲ್ಲಿ ಹೆಣ್ಣು ಮಕ್ಕಳು ಸೇರುವ ಜಾಗಗಳಲ್ಲಿ ವರ್ಕ್ ಶಾಪ್‌ಗಳನ್ನು ಮಾಡುತ್ತಾ ಹೆಣ್ಣು ಮಕ್ಕಳ ಪ್ರಸ್ತುತ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ಕುರಿತು ಅವರನ್ನೇ ಮಾತನಾಡಿಸಿ ಮಾಹಿತಿಗಳನ್ನು ಸಂಗ್ರಹಿಸುವುದರ ಜೊತೆ ಜೊತೆಗೆ ಹೆಣ್ಣು ಮಕ್ಕಳು ಹಿಂದುಳಿಯಲು ಮುಖ್ಯವಾದ ಐದು ಕಾರಣಗಳನ್ನು ಅರಿಯಲು ಪ್ರಯತ್ನಿಸಿದರು.

* ಶೈಕ್ಷಣಿಕ ಕೊರತೆ
* ಕೌಟುಂಬಿಕ ಅಸಹಕಾರ
* ಆರ್ಥಿಕ ದುರ್ಬಲತೆ
* ಹೆಣ್ಣು ಮಕ್ಕಳನ್ನು ಎರಡನೇ ದರ್ಜೆಯ ಪ್ರಜೆಯಂತೆ ನಡೆಸಿಕೊಳ್ಳುವುದು, ಹೆಣ್ಣಾಗಿ ಮತ್ತೊಬ್ಬ ಹೆಣ್ಣಿನ ತೊಂದರೆಯನ್ನು ಅರಿತುಕೊಳ್ಳದೆ ಇರುವುದು
* ಪರಂಪರಾನುಗತವಾಗಿ ನಡೆದು ಬಂದಿರುವ ಹೆಣ್ಣು ಮಕ್ಕಳ ಮೇಲೆ ಹೇರಿರುವ ಮೂಢನಂಬಿಕೆಗಳು ಹೆಣ್ಣು ಮಕ್ಕಳ ಇಂದಿನ ಪರಿಸ್ಥಿತಿಗೆ ಕಾರಣವಾಗಿವೆ ಎಂಬುದು ದೇಶದ ವಿವಿಧೆಡೆಯಿಂದ ಬಂದ ದೂರಾಗಿತ್ತು.

ಹೆಣ್ಣು ಮಕ್ಕಳು ಸಾಂಘಿಕವಾಗಿ ಪ್ರಯತ್ನ ಮಾಡದೇ ಇರುವುದು, ನಮ್ಮ ಹಣೆಬರಹವೇ ಇಷ್ಟು ಎಂದು ಎಲ್ಲವನ್ನು ಹಣೆಬರಹಕ್ಕೆ ಬಿಟ್ಟು ಕೊಡುವುದು, ಆರ್ಥಿಕ ಬೆಂಬಲ ಹೊಂದದೆ ಇರುವುದು ಮತ್ತು ಮುಖ್ಯವಾಗಿ ನಮ್ಮ ಸಮಾಜದ ಪುರುಷ ಪ್ರಧಾನ ಮನಸ್ಥಿತಿ ಇದಕ್ಕೆಲ್ಲ ಕಾರಣ ಎಂದು ಸಾರಿ ಸಾರಿ ಹೇಳುತ್ತಿತ್ತು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ

ಹೆಣ್ಣು ಮಕ್ಕಳ ಸಬಲೀಕರಣಕ್ಕೆ ಈಗಾಗಲೇ ಸಾಕಷ್ಟು ಹೋಮ್ ವರ್ಕ್ ಮಾಡಿಕೊಂಡಿದ್ದ ಸೃಷ್ಟಿ ಮತ್ತು ಆಕೆಯ ತಂಡದವರು ತಾವು ಸಂದರ್ಶಿಸಿದ ಎಲ್ಲಊರುಗಳಲ್ಲಿಕಾರ್ಯಾಗಾರಗಳನ್ನು ನಡೆಸುತ್ತಾಮಹಿಳೆಯರಸಬಲೀಕರಣದ ಕುರಿತಾಗಿ ಅವರಿಗೆ ತಿಳಿ ಹೇಳುತ್ತಾ, ಆರ್ಥಿಕವಾಗಿ ಸ್ವಾತಂತ್ರ್ಯವನ್ನು ಹೊಂದಲು ಅನುವಾಗುವಂತಹ ಸ್ವಯಂ ಉದ್ಯೋಗದ ಕುರಿತು ತಿಳುವಳಿಕೆಯನ್ನು ನೀಡುತ್ತಾ ಸುಮಾರು 240 ದಿನಗಳ ಕಾಲ ಪಾದಯಾತ್ರೆಯ ಮೂಲಕ ಸಂಚರಿಸಿ ಅಂತಿಮವಾಗಿ ಕಾಶ್ಮೀರವನ್ನು ತಲುಪಿದರು.

ಈ ಸಮಯದಲ್ಲಿ ಆಕೆಯೊಂದಿಗೆ ಮಾತಿಗೆ ಸಿಕ್ಕ ಹೆಣ್ಣು ಮಕ್ಕಳಲ್ಲಿ ಸಮಾಜದ ಅವಗಣನೆಗೆ ಕೇವಲ ಬಡ,ಅವಿದ್ಯಾವಂತ ಮಹಿಳೆಯರು ಮಾತ್ರ ಪಾತ್ರವಾಗಿಲ್ಲ ವಿದ್ಯಾವಂತರು ಕೂಡ ಸಮಾಜದ ಸೋ ಕಾಲ್ಡ್ ನಿಯಮಗಳಿಗೆ ಬಲಿಯಾಗಿದ್ದಾರೆ ಎಂಬುದು ಬೆಳಕಿಗೆ ಬಂದಿದೆ. ಲೋಗ್ ಕ್ಯಾ ಕಹೆಂಗೆ?? ಜನ ಏನೆನ್ನುತ್ತಾರೆ?? ಎಂಬ



ಸಾಮಾಜಿಕ ಭಯಕ್ಕೆ, ತಮ್ಮ ಮನೆಯ ಹೆಣ್ಣು ಮಕ್ಕಳ ಬಾಳಿನ ವಿನಾಶಕ್ಕೆ ಕಾರಣವಾದ ಪಾಲಕರೂ ಉಂಟು. ಆತನೊಂದಿಗೆ ವಿವಾಹವಾಗಲು ನಿರಾಕರಿಸಿದಳು ಎಂಬ ಏಕೈಕ ಕಾರಣಕ್ಕೆ ಆಕೆಯ ಮದುವೆಯಾದ ಮೇಲೆ ಆಕೆಯನ್ನು ಬೆಂಬತ್ತಿ ರೈಲಿನಲ್ಲಿ ಆಕೆಯ ಮುಖಕ್ಕೆ ಆಸಿಡ್ ಎರಚಿ ಪರಾರಿಯಾಗಲು ಪ್ರಯತ್ನಿಸಿದ ವ್ಯಕ್ತಿಯಿಂದ ಹಿಡಿದು, ತಮ್ಮ ಕಾಮ ಪಿಪಾಸೆಗೆ ಪುಟ್ಟ ಹಸುಳೆಗಳನ್ನು ಬಳಸಿ ನಂತರ ಕೊಂದು ಹಾಕುವ ಪಾತಕಿಗಳವರೆಗೆ, ಮದುವೆಯಾದ ನಂತರ ಹೆಣ್ಣಿನ ದೇಹದ ಕುರಿತಾದ ಅವಹೇಳನದ ಮಾತುಗಳು ಬಾಡಿ ಶೇಮಿಂಗ, ಮನೆ ಮನೆಗಳಲ್ಲಿ ಆಗುತ್ತಿರುವ ಕೌಟುಂಬಿಕ ದೌರ್ಜನ್ಯಗಳ ಬಲಿಪಶುವಾಗುತ್ತಿರುವ ಹೆಣ್ಣು ಮಕ್ಕಳು ಮನೆಯಿಂದ ಹೊರಬರಲು ವೈಯುಕ್ತಿಕ ಆರ್ಥಿಕ ಸ್ವಾತಂತ್ರ್ಯವನ್ನು ಹೊಂದಿರದೆ ಇರುವುದು ಸಮಸ್ಯೆಯ ಮೂಲವಾಗಿದೆ.

ತನ್ನ ಬಟ್ಟೆಗಳನ್ನು ಒಗೆದು ಹಾಕಿಲ್ಲ, ಅಡಿಗೆ ಸರಿಯಾಗಿ ಮಾಡಿಲ್ಲ, ತನ್ನ ಮಾತಿಗೆ ಎದುರುತ್ತರ ಕೊಡುತ್ತಾಳೆ,ತನಗೆ ಕುಡಿಯಲು ಕಾಸು ಕೊಡುತ್ತಿಲ್ಲ ಎಂಬ ಕ್ಷುಲ್ಲಕ ಕಾರಣಗಳು ಸಾಕು ಹೆಣ್ಣು ಮಕ್ಕಳನ್ನು ಹೊಡೆಯಲು.... ಇದು ಮನೆ ಮನೆಗಳ ಕಥೆಯಾಗಿದೆ. ಈ ಕುರಿತು ಗಂಡು ಹುಡುಗರನ್ನು, ಪುರುಷರನ್ನು ಪ್ರಶ್ನಿಸಿದಾಗ ಅಸಡ್ಡೆಯ ನಗುವಿನೊಂದಿಗೆ ಹಿಂದಿನಿಂದಲೂ ಹೀಗೆಯೇ ನಡೆದು ಬಂದಿದೆ ಎಂದು ಹೇಳುತ್ತಾರೆ ಎಂದರೆ ನಮ್ಮ ಸಾಮಾಜಿಕ ಕ್ರೌರ್ಯದ ಅರಿವು ಉಂಟಾಗಬಹುದು.

ತನ್ನ 240 ದಿನಗಳ ಪಾದಯಾತ್ರೆಯಲ್ಲಿ ತೊಂದರೆಗಳ ಜೊತೆ ಜೊತೆಗೆ ಹೆಣ್ಣು ಮಕ್ಕಳ ಮೇಲೆ ಆಗುತ್ತಿರುವ ಅನಾಚಾರಗಳನ್ನು ಕಂಡು . ಒಂದೊಮ್ಮೆ ಆಕೆಯ ತಂದೆ ಮತ್ತು ಪತಿ ಆಕೆಯ ಜೊತೆಗಿಲ್ಲದೆ ಹೋದರೆ ಸಂಪೂರ್ಣ ಕುಸಿದು ಹೋಗುತ್ತಿದ್ದಳೇನೋ ಎಂಬಷ್ಟರ ಮಟ್ಟಿಗೆ ಮಾನಸಿಕ ದಣಿವನ್ನು, ಅವ್ಯಕ್ತ ನೋವನ್ನು ಕೂಡ ಸೃಷ್ಟಿ ಅನುಭವಿಸಿದ್ದಾಳೆ. ಸುಮಾರು 240 ದಿನಗಳ ಕಾಲ 3800 ಕಿಲೋಮೀಟರ್ ಪಾದಯಾತ್ರೆ ಮಾಡಿದ ಸೃಷ್ಟಿ ತಾನು ಭೇಟಿಯಾದ ಹೆಣ್ಣು ಮಕ್ಕಳಿಗೆ ಹೇಳಿ ಕೊಟ್ಟಿರುವುದು ನಿನಗೋಸ್ಕರ ನೀನು ಎದ್ದು ನಿಲ್ಲು ಎಂದು.

ನಮ್ಮ ಭೂತವನ್ನು ನಾವು ಬದಲಿಸಲು ಸಾಧ್ಯವಿಲ್ಲ ಭವಿಷ್ಯದ ಕುರಿತು ನಮಗೆ ಅರಿವಿಲ್ಲ, ಆದರೆ ನಮ್ಮ ವರ್ತಮಾನವನ್ನು ಸುಧಾರಿಸಿಕೊಳ್ಳಲು ಇರುವ ಕಿಂಚಿತ್ ಅವಕಾಶವನ್ನು ಕಳೆದುಕೊಳ್ಳದೆ ಇರುವ ಕುರಿತು ಸೃಷ್ಟಿ ಮಾತನಾಡಿದ್ದು ನಮಗೋಸ್ಕರ ನಾವು ದನಿ ಎತ್ತದಿದ್ದರೆ, ಹೋರಾಡದಿದ್ದರೆ ಸಾಂಘಿಕ ಪ್ರಯತ್ನವನ್ನು ಮಾಡದೇ ಬೇರೆ ಯಾರೋ ನಮ್ಮನ್ನು ಉದ್ಧರಿಸುತ್ತಾರೆ ಎಂದು ಕಾಯ್ದು ಕೂಡುವುದು, ಇಲ್ಲವೇ ನಮ್ಮ ಹಣೆಯಲ್ಲಿ ಬರೆದಿದ್ದೆ ಇಷ್ಟು ಎಂದು ಕಾಣದ ವಿಧಿಯ ಮೇಲೆ ಹಾಕಿ ಕುಳಿತುಕೊಳ್ಳುವುದು ಎಷ್ಟರಮಟ್ಟಿಗೆ ಸರಿ ಎಂದು ಆಕೆ ಮಹಿಳೆಯರನ್ನು ಪ್ರಶ್ನಿಸಿ ಅವರಲ್ಲಿ ಜಾಗೃತಿಯನ್ನು ಮೂಡಿಸಿದ್ದಾಳೆ.

In order to achieve something you never had... you have to do something you never did ಅಂದರೆ ಈ ಹಿಂದೆ ಸಾಧಿಸಲಾಗದ ಹೊಸದೇನನ್ನಾದರೂ ಸಾಧಿಸಬೇಕೆಂಬ ಛಲ ನಿನಗಿದ್ದರೆ, ಆ ವಿಷಯದ ಕುರಿತು ಈ ಹಿಂದೆ ಮಾಡಲಾಗದ ಯಾವುದಾದರೊಂದು ದಿಶೆಯಲ್ಲಿ ನೀನು ಕಾರ್ಯನಿರ್ವಹಿಸಲೇಬೇಕು ಎಂಬ ಧ್ಯೇಯವನ್ನು ಇಟ್ಟುಕೊಂಡು ಪ್ರತಿದಿನ ಸುಮಾರು ಮೂವತ್ತು ಕಿಲೋಮೀಟರ್ ನಡಿಗೆಯ ಮೂಲಕ ತನ್ನ ಪಾದಯಾತ್ರೆಯನ್ನು ಪೂರೈಸಿದ ಸೃಷ್ಟಿಭಕ್ಷಿ ಹೇಳುವುದು ಇಷ್ಟು. ಸಾಮಾಜಿಕ ಸ್ಥಾನಮಾನ, ಆರ್ಥಿಕ ಭದ್ರತೆ, ಹೆಣ್ಣು ಮಕ್ಕಳ ಕುರಿತಾದ ನಿಕೃಷ್ಟತೆ, ಹೆಣ್ಣು ಮಕ್ಕಳನ್ನು ಹೊರೆ ಎಂದು ಭಾವಿಸುವ ಪಾಲಕರು, ಅಂತಿಮವಾಗಿ ಹೆಣ್ಣು ಮಕ್ಕಳ ಬದುಕಿನ ಗುರಿ ಮದುವೆ ಎಂಬ ಲೋಕಾರೂಢಿ ಇವೆಲ್ಲವೂ ಹೆಣ್ಣು ಮಕ್ಕಳ ಬದುಕನ್ನು ನಿರ್ಧರಿಸುವ ಮಾಪಕಗಳು.

ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ಆಗುತ್ತಿರುವುದಕ್ಕೆ ಕಾರಣ ಅದರ ಕುರಿತು ಯಾರೂ ಮಾತನಾಡದೆ ಇರುವುದು. ಸ್ವತಹ ಹೆಣ್ಣು ಮಕ್ಕಳೇ ತಮ್ಮ ಮೇಲಾಗುವ ದೌರ್ಜನ್ಯಗಳನ್ನು ತಮ್ಮ ದೌರ್ಭಾಗ್ಯ ಎಂದು ಭಾವಿಸುವುದು ಈ ಎಲ್ಲ ಕಾರಣಗಳು ಹೆಣ್ಣು ಮಕ್ಕಳಲ್ಲಿ ಕೀಳರಿಮೆಯನ್ನು ಉಂಟು ಮಾಡುತ್ತಿವೆ. ಪುರುಷಪ್ರಧಾನ ಸಾಮಾಜಿಕ ವ್ಯವಸ್ಥೆಯು ಹೆಣ್ಣು ಮಕ್ಕಳನ್ನು ಸಶಕ್ತವಾಗಿ ಬಗ್ಗು ಬಡಿ ದಿರುವುದಕ್ಕೆ ಕಾರಣ ತಲೆತಲಾಂತರಗಳಿಂದ ನಂಬಿಕೊಂಡು ಬಂದಿರುವ ಕೆಲ ಸಿದ್ಧಾಂತಗಳು.

ಸೃಷ್ಟಿ ಮತ್ತೊಂದು ಮಾತನ್ನು ಹೇಳುತ್ತಾರೆ..... ಬಹುಸಂಖ್ಯಾತ ಮಹಿಳೆಯರ ಮೇಲೆ ಅಲ್ಪಸಂಖ್ಯಾತ ಪುರುಷರ ದಬ್ಬಾಳಿಕೆಗೆ ಕಾರಣ ಮಹಿಳೆಯರ ಮೌನ ಎಂದು. ತಮ್ಮ ಮೇಲಾಗುತ್ತಿರುವ ದೌರ್ಜನ್ಯಗಳನ್ನು ಮೌನವಾಗಿ ಸಹಿಸಿಕೊಳ್ಳುವ ಹೆಣ್ಣು ಮಕ್ಕಳು ಸಂಘಟಿತರಾಗಬೇಕು, ಆರ್ಥಿಕವಾಗಿ ಸಶಕ್ತರಾಗಬೇಕು. ಈಗ ಶಾಲೆ ಕಾಲೇಜುಗಳಲ್ಲಿ ಓದುತ್ತಿರುವ ಮಕ್ಕಳು ತಮ್ಮ ವಿದ್ಯಾಭ್ಯಾಸವನ್ನು ಪೂರೈಸಿ ಉದ್ಯೋಗ ಹೊಂದಿ ತಮ್ಮ ಕಾಲ ಮೇಲೆ ತಾವು ನಿಂತುಕೊಳ್ಳಬೇಕು. ಇನ್ನು ಈಗಾಗಲೇ ಮದುವೆಯಾಗಿ ಮಕ್ಕಳನ್ನು ಹೊಂದಿರುವ ಹೆಣ್ಣು ಮಕ್ಕಳು ಆರ್ಥಿಕ ಸಶಕ್ತಿಕರಣ ಪಡೆಯಬೇಕು. ವಿದ್ಯುನ್ಮಾನ ಯುಗದಲ್ಲಿ ಹೊಸ ವಿಷಯಗಳನ್ನು ಕಲಿಯಲು ಅಂತರ್ಜಾಲದಲ್ಲಿ ಸಾಕಷ್ಟು ಅವಕಾಶಗಳಿದ್ದು ನಿಮ್ಮ ಮನೆ ಬಾಗಿಲಿನಲ್ಲಿ ವಿವಿಧ ವಸ್ತುಗಳನ್ನು ತಯಾರಿಸುವ ಮತ್ತು ಮಾರಾಟ ಮಾಡುವ ಮೂಲಕ ಆರ್ಥಿಕ ಸಬಲೀಕರಣವನ್ನು ಹೊಂದಬೇಕು. ಈ ನಿಟ್ಟಿನಲ್ಲಿ ಭಾರತ ಸರ್ಕಾರ ನಾರಿ ಶಕ್ತಿ ಕಾರ್ಯಕ್ರಮವನ್ನು ಕೂಡ ಆಯೋಜಿಸಿದ್ದು ದೇಶದ ಪ್ರತಿಯೊಂದು ಗ್ರಾಮವು ಹೆಣ್ಣು ಮಕ್ಕಳ ಸಶಕ್ತಿಕರಣಕ್ಕೆ ಒತ್ತಾಸೆಯಾಗಿ ನಿಂತಿದ್ದು ಅದರ ಸಂಪೂರ್ಣ ಉಪಯೋಗವನ್ನುಪಡೆದುಕೊಂಡುತಾವುಕೂಡಆರ್ಥಿಕಸ್ವಾವಲಂಬನೆಯನ್ನು ಹೊಂದಬೇಕು.

20ಕ್ಕೂ ಹೆಚ್ಚು ಜನ ಮಹಿಳೆಯರನ್ನು ವೈಯಕ್ತಿಕವಾಗಿ ಸಂದರ್ಶಿಸಿರುವ ಸಾವಿರಾರು ಮಹಿಳೆಯರನ್ನು ಉದ್ದೇಶಿಸಿ ಮಾತನಾಡಿರುವ ಸೃಷ್ಟಿ ಈ ವರ್ಕ್ ಶಾಪ್ ನಲ್ಲಿ ಹೆಣ್ಣು ಮಕ್ಕಳು ತಮಗಾಗಿ ತಾವು ಬದುಕುವ, ಬಾಳುವ ಕುರಿತು ಭರವಸೆ ಮೂಡಿಸಿದ್ದಾಳೆ ಎಂದರೆ ತಪ್ಪಿಲ್ಲ. ವಿವಿಧ ಕ್ಷೇತ್ರಗಳಲ್ಲಿ ತೊಡಗಿಕೊಂಡಿರುವದೌರ್ಜನ್ಯಕ್ಕೊಳಗಾದಮಹಿಳೆಯರಯಶೋಗಾಥೆಗಳನ್ನು ಕೂಡ ಹೇಳಿದ್ದಾಳೆ. ತನ್ನ ಪಾದಯಾತ್ರೆಯ ಸಮಯದಲ್ಲಿ ಸುಮಾರು 20 ಲಕ್ಷಕ್ಕೂ ಹೆಚ್ಚು ಜನರ ಬೆಂಬಲವನ್ನು ಪಡೆದ ಸೃಷ್ಟಿ 2022 ರಲ್ಲಿ ವಿಶ್ವ ಸಂಸ್ಥೆಯವರು ಕೊಡ ಮಾಡುವ ಎಸ್ ಡಿ ಜಿ ( ಸಸ್ಟೇನೇಬಲ್ ಡೆವಲಪ್ಮೆಂಟ್ ಗೋಲ್) ನ ಗ್ಲೋಬಲ್ ಚೇಂಜ್ ಮೇಕರ್ ಫಾರ್ ಎಂಪವರಿಂಗ್ ಗರ್ಲ್ಸ್ ಅಂಡ್ ವಿಮನ್ ಯೂಸಿಂಗ್ ಥ ಟೂಲ್ಸ್ ಆಫ್ ಡಿಜಿಟಲ್ ಅಂಡ್ ಫೈನಾನ್ಸಿಯಲ್ ಲಿಟರಸಿ ಪ್ರಶಸ್ತಿಯನ್ನು ಪಡೆದಿದ್ದಾರೆ.

WOMB.... ವಿಮೆನ್ ಆಫ್ ಮೈ ಬಿಲಿಯನ್ ಶೀರ್ಷಿಕೆಡಿ ದೇಶದ ಉದ್ದಕ್ಕೂ ಪಾದಯಾತ್ರೆ ಮಾಡಿರುವ ಸೃಷ್ಟಿಯ ಈ ಪಯಣದ ಹಾದಿಯನ್ನು ಅದ್ಭುತ ಮಾನಸಿಕ ಸೌಂದರ್ಯವನ್ನು ಹೊಂದಿರುವ ಪ್ರಿಯಾಂಕ ಚೋಪ್ರಾ ಜೋನೆಸ್ ನಿರ್ಮಾಣ ಸಂಸ್ಥೆಯಡಿ ಅದೇ ಹೆಸರಿನ ಸಾಕ್ಷ್ಯ ಚಿತ್ರವಾಗಿ ನಿರ್ಮಾಣಗೊಂಡಿದ್ದು, ಅಜಿತೇಶ್ ಶರ್ಮಾ ನಿರ್ದೇಶನದಲ್ಲಿ ಈ ಚಿತ್ರ ಅತ್ಯುತ್ತಮ ಸಾಕ್ಷ್ಯ ಚಿತ್ರವಾಗಿ ಒಡಮೂಡಿದೆ.

ಕೊನೆಯಲ್ಲಿ ಒಂದು ಮಾತು.... ದೌರ್ಜನ್ಯ ಮಾಡುವುದು ತಪ್ಪಾದರೆ.... ದೌರ್ಜನ್ಯವನ್ನು ಸಹಿಸಿಕೊಳ್ಳುವುದು ಕೂಡ ತಪ್ಪೇ?. ನಮ್ಮ ಕುಟುಂಬದ, ಸಮಾಜದ ಒಳಿತಿಗಾಗಿ ನಾವು ತಾಳ್ಮೆಯಿಂದ ಇರಬೇಕು ನಿಜ ಆದರೆ ನಮ್ಮ ತಾಳ್ಮೆಯೇ ನಮ್ಮನ್ನು ದಳ್ಳುರಿಯಂತೆ ಸುಡತೊಡಗಿದರೆ ದುರ್ಗಿಯಂತೆ ರಾಕ್ಷಸ ಸಂಹಾರವನ್ನು ಮಾಡಲೇಬೇಕು.

ಹೆಣ್ಣಿಂದಲೇ ಇಹಪರಗಳು, ಹೆಣ್ಣು ಸಮಾಜದ ಕಣ್ಣು, ಹುಟ್ಟಿಸಿದ ದೇವರೇ ಹೆಣ್ಣು ಮಕ್ಕಳಲ್ಲಿ ಭೇದವನ್ನು ಎಣಿಸದೆ ಹೋದಾಗ ಹಡೆದವರು ಎಣಿಸುವುದು ತಪ್ಪು. ನಿಮ್ಮ ಹೆಣ್ಣು ಮಕ್ಕಳು ನಿಮ್ಮ ಮನೆ ಮನಗಳನ್ನು ಬೆಳಗುವ ನಂದಾದೀಪಗಳು. ಅವರ ಭಾವನೆಗಳನ್ನು ಗೌರವಿಸಿ, ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಿಸಿ, ಆರ್ಥಿಕ ಸ್ವಾವಲಂಬಿಗಳಾಗುವ ನಿಟ್ಟಿನಲ್ಲಿ ದಾರಿ ತೋರಿಸಿ. ನಿಮ್ಮ ತಾಯಿ ತಂಗಿಯರು ಅನುಭವಿಸಿದ ನೋವು ಕಷ್ಟಗಳನ್ನೇ ನಿಮ್ಮ ಪತ್ನಿ, ಮಗಳು ಮತ್ತು ಸೊಸೆ ಅನುಭವಿಸದಿರುವ ನಿಟ್ಟಿನಲ್ಲಿ ಅವರನ್ನು ಆರ್ಥಿಕ ಸ್ವಾವಲಂಬನೆಗೊಳಪಡಿಸಿ. ಸಂವೇದನಾಶೀಲರಾಗಿ ವರ್ತಿಸಿ. ಇಂತಹ ಹೆಚ್ಚು ಹೆಚ್ಚು ಕಾರ್ಯಕ್ರಮಗಳ ಮೂಲಕ ಹೆಣ್ಣು ಮಕ್ಕಳ ಅಸ್ಮಿತೆಯನ್ನು ಗುರುತಿಸುವ ಗೌರವಿಸುವ ಪ್ರೇರೇಪಿಸುವ ಕಾರ್ಯಾಗಾರಗಳಾಗಲಿ ಹೆಣ್ಣು ಮಕ್ಕಳಲ್ಲಿ ಉತ್ಸಾಹ, ಬದುಕಿನ ಕುರಿತಾದ ಹೊಸ ಭರವಸೆ ಎಲ್ಲಕ್ಕಿಂತ ಮುಖ್ಯವಾಗಿ ಲಿಂಗ ಸಮಾನತೆ ಪ್ರತಿ ಮನಗಳಲ್ಲಿ ಪ್ರತಿ ಮನೆಗಳಲ್ಲಿ ಬೇರೂರಲಿ.

ನಿಮ್ಮ ಮನೆಯಲ್ಲಿ ಹುಟ್ಟಿರುವ ಹೆಣ್ಣು ಮಕ್ಕಳನ್ನು ಹೊರೆ ಎಂಬ ಭಾವದಿಂದ ನೋಡಬೇಡಿ.ಗಂಡನ ಮನೆಗೆ ಹೋಗುವ ಹೆಣ್ಣು ಮಕ್ಕಳಿಗೆ ವರದಕ್ಷಿಣೆ ಕೊಡುವುದು ಬೇಡ ಅದರ ಬದಲಾಗಿ ಅವರ ಬದುಕನ್ನು ನೇರ್ಪಡಿಸುವಂತಹ ವಿದ್ಯಾಭ್ಯಾಸ ಕೊಟ್ಟು ಆಕೆಯನ್ನು ಆರ್ಥಿಕವಾಗಿ ಸಬಲಗೊಳಿಸಿ.

ಹೆಣ್ಣು ಮಕ್ಕಳನ್ನು ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಲಕ್ಷಾಂತರ ಮಹಿಳೆಯರನ್ನು ಯುವತಿಯರನ್ನು ವಿದ್ಯಾರ್ಥಿಗಳನ್ನು ತಮ್ಮ ಪಾದಯಾತ್ರೆಯ ನಿಮಿತ್ತ ಭೇಟಿಯಾದ ಸೃಷ್ಟಿ ಭಕ್ಷಿ ಅಂತಿಮವಾಗಿ ಹೇಳಿದ್ದು ಭವ್ಯ ಭಾರತ ದೇಶದಲ್ಲಿ ಹೆಣ್ಣು ಮಕ್ಕಳ ಸ್ಥಿತಿ ಇನ್ನು ಕೆಲವೇ ವರ್ಷಗಳಲ್ಲಿ ಸುಧಾರಿಸಬಹುದು ಎಂದು.

ಮಹಿಳಾ ಸಬಲೀಕರಣದತ್ತ ಸೃಷ್ಟಿ ಇಟ್ಟಿರುವ ಈ ವಾಮನ ಹೆಜ್ಜೆ ಇಡೀ ಜಗತ್ತಿನ ಎಲ್ಲೆಡೆ ಪಸರಿಸಲಿ, ಹೆಣ್ಣು ಮಕ್ಕಳ ಬದುಕು ಹಸನಾಗಲಿ, ಅಂತಹ ಪ್ರಯತ್ನಪಡುವ ಹೆಣ್ಣು ಮಕ್ಕಳ ಸಂಖ್ಯೆ ಸಾವಿರ ಕೋಟಿಯಾಗಲಿ ಎಂದು ಹಾರೈಸುವ.



- Admissions
- Requirements
- Firm Branding
- Public Notice
- Change of Name

BOOK NOW!

Booking Open for Your Advertisements in Leading Local, State & National News Papers

9482599089 / 9448633038

- Obituary
- Remembrance
- Birthday wish ads
- Events Display &
- Classified ads

SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.


## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ಕ್ರೋಧಿ

30–05–2024 – ಗುರುವಾರ

| | |
|---|---|
| ತಿಥಿ | : ಸಪ್ತಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಧನಿಷ್ಠ |
| ಯೋಗ | : ವೈಧೃತಿ |
| ಕರಣ | : ಭವ |
| ಸೂರ್ಯೋದಯ | : 05:42:25 |
| ಸೂರ್ಯಾಸ್ತ | : 19:06:53 |
| ರಾಹು | : 14:05–15:46 |
| ಯಮಘಂಡ | : 05:42–07:23 |
| ಗುಳಿಕ | : 09:04–10:44 |

## ತುಂಗಭದ್ರಾ ನೀರಿನ ಮಟ್ಟ



ಬುಧವಾರ : 29–05–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1577.40 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 45 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.338 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1580.02 ಅಡಿ |
| ಒಳ ಹರಿವು | 1418 ಕ್ಯುಸೆಕ್ |
| ಹೊರ ಹರಿವು | 238 ಕ್ಯುಸೆಕ್ |
| ಸಾಮರ್ಥ್ಯ | 4.473 ಟಿಎಂಸಿ |

## ಅಂತರ ಇಲಾಖಾ ಸಮನ್ವಯ ಸಮಿತಿ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

2024–25ನೇ ಸಾಲಿನ ದಡಾರ ಮತ್ತು ರುಬೇಲ್ಲಾ ನಿರ್ಮೂಲನಾ ಕಾರ್ಯಕ್ರಮದ ಅಂತರ ಇಲಾಖಾ ಸಮನ್ವಯ ಸಮಿತಿ ಸಭೆಯು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಹೊಸಪೇಟೆ ಸಭಾಂಗಣದಲ್ಲಿ ಮೇ 30ರ ಮಧ್ಯಾಹ್ನ 3 ಗಂಟೆಗೆ ನಡೆಯಲಿದೆ. ಸಂಬಂಧಪಟ್ಟ ಅಧಿಕಾರಿಗಳು ತಪ್ಪದೇ ಸಭೆಗೆ ಹಾಜರಾಗಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಪ್ರಕಟಣೆಯಲ್ಲಿತಿಳಿಸಿದ್ದಾರೆ.

## ಕಮಲಾಪುರದ ಸರಕಾರಿ ಮೌಲಾನಾ ಆಜಾದ್ ಮಾದರಿ ಆಂಗ್ಲ ಮಾಧ್ಯಮ ಶಾಲೆಗೆ ಪ್ರವೇಶ ಆರಂಭ

**ಹಂಪಿ ಟೈಮ್ಸ್ ಹೊಸಪೇಟೆ**

2024–25ನೇ ಶೈಕ್ಷಣಿಕ ಸಾಲಿನಲ್ಲಿ ಅಲ್ಪಸಂಖ್ಯಾತರ ಸರಕಾರಿ ಮೌಲಾನಾ ಆಜಾದ್ ಮಾದರಿ ಆಂಗ್ಲ ಮಾಧ್ಯಮ ಶಾಲೆ ಕಮಲಾಪುರದಲ್ಲಿ 6ನೇ ತರಗತಿಯಿಂದ 9ನೇ ತರಗತಿಯವರೆಗಿನ ದಾಖಲಾತಿ ಪ್ರಕ್ರಿಯೆ ಆರಂಭವಾಗಿದೆ.

ಈ ಮುಂಚೆ ಯಾವುದೇ ಅರ್ಜಿ ಸಲ್ಲಿಸದೇ ಇದ್ದರೂ ಪ್ರವೇಶ ಪರೀಕ್ಷೆಗೆ ಅವಕಾಶ ನೀಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ 9353211090, 9611973740, 9482775439 ಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರಾಂಶುಪಾಲರಾದ ಮಂಜುನಾಥ ಪಾಟೀಲ್ ಅವರು ತಿಳಿಸಿದ್ದಾರೆ. ಇದು ಆಂಗ್ಲ ಮಾಧ್ಯಮ ಶಾಲೆಯಾಗಿದ್ದು 2022–23ನೇ ಸಾಲಿನಲ್ಲಿ ಶೇ.100ರಷ್ಟು ಫಲಿತಾಂಶ ದಾಖಲಾಗಿದೆ. ಉಚಿತವಾಗಿ ಬಟ್ಟೆ (ಶಾಲಾ ಸಮವಸ್ತ್ರ), ಬ್ಯಾಗ್, ಉಚಿತ ಪಠ್ಯಪುಸ್ತಕ, ಕಲಿಕಾ ಸಾಮಗ್ರಿಗಳನ್ನು ನೀಡಲಾಗುತ್ತದೆ. ಈ ಶಾಲೆಯು ಉತ್ತಮ ಕಟ್ಟಡ ಆಟೋಟ ಮೈದಾನ, ಕ್ರೀಡಾ ಸಾಮಗ್ರಿಗಳನ್ನು ಹೊಂದಿದ್ದು ಕಲಿಕೆ ಪೂರಕವಾಗಿದೆ ಎಂದು ತಿಳಿಸಿದ್ದಾರೆ.

# ಬೀಜ-ಗೊಬ್ಬರ ಹೆಚ್ಚಿನ ಧರಕ್ಕೆ ಮಾರಿದರೆ ನಿರ್ದಾಕ್ಷಿಣ್ಯ ಕ್ರಮ

### ತಹಶೀಲ್ದಾರ್ ಅಮರೇಶ್ ಜಿ ಕೆ ಹೇಳಿಕೆ । ಕೃಷಿ ಪರಿಕರಗಳ ಅಂಗಡಿ ಮಾಲಿಕರ ಸಭೆ

**ಹಂಪಿ ಟೈಮ್ಸ್ ಕೊಟ್ಟೂರು**




ಲಾಭದ ಆಸೆಗಾಗಿ ಕಳಪೆಮಟ್ಟದ ಬೀಜ–ಗೊಬ್ಬರ ಮಾರಾಟ ಮಾಡಿದರೆ ಅಥವಾ ಸರ್ಕಾರ ನಿಗಧಿಪಡಿಸಿದ ಧರಕ್ಕಿಂತ ಹೆಚ್ಚಿಗೆ ಮಾರಾಟ ಮಾಡಿದರೆ ಅಂತಹವರ ವಿರುದ್ಧ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು ಎಂದು ತಹಶಿಲ್ದಾರ ಅಮರೇಶ್ ಜಿ.ಕೆ ಎಚ್ಚರಿಕೆ ನೀಡಿದರು.

ತಾಲೂಕ ಕಛೇರಿಯ ಮಹಾತ್ಮಗಾಂಧೀಜಿ ಸಭಾಂಗಣದಲ್ಲಿ, ರೈತರಿಗೆ ಉತ್ತಮ ಬೀಜ ಮತ್ತು ಗೊಬ್ಬರ ಸಿಗಬೇಕೆನ್ನುವ ಉದ್ದೇಶದಿಂದ ಬುಧವಾರ ತಾಲೂಕಿನ ಕೃಷಿ ಪರಿಕರಗಳ ಅಂಗಡಿ ಮಾಲಿಕರ ಸಭೆ ನಡೆಸಲಾಯಿತು.

ಈ ಬಾರಿ ಪೂರ್ವಮುಂಗಾರು ಉತ್ತಮ ಮಳೆಯಾಗುತ್ತಿದ್ದು ಕಳೆದ ಬಾರಿಯ ರೈತರ ನೋವನ್ನು ಮರೆಸಿ ಸ್ವಲ್ಪ ಸಂತಸವನ್ನು ತಂದಿದೆ. ರೈತರು ಬಿತ್ತನೆ ಕಾರ್ಯವನ್ನು ಪ್ರಾರಂಭಿಸಿದ್ದು, ಅವರಿಗೆ ಉತ್ತಮ ಗುಣಮಟ್ಟದ ಬೀಜ ಹಾಗೂ ರಸಗೊಬ್ಬರವನ್ನು ವ್ಯಾಪಾರಸ್ತರು ಮಾರಾಟ ಮಾಡಬೇಕು ಎಂದು ಎಚ್ಚರಿಕೆ ನೀಡಿದರು.

ವ್ಯಾಪಾರಸ್ತರು ತಾವು ಸಂಗ್ರಹಮಾಡಿರುವ ಗೋದಾಮಿನ ಮುಂದೆ ತಮ್ಮ ಅಂಗಡಿಯ ಮಾಹಿತಿ ಫಲಕವನ್ನು ಹಾಕಬೇಕು. ಅಂಗಡಿಯಲ್ಲಿ ಪ್ರತಿದಿನ ಬೀಜ ಗೊಬ್ಬರದ ದಾಸ್ತಾನು ಹಾಗೂ ಧರಪಟ್ಟಿಯನ್ನು ಕಡ್ಡಾಯವಾಗಿ ಹಾಕಿರಬೇಕು.

ಗೊಬ್ಬರ ಬೀಜಗಳನ್ನು ದಾಸ್ತಾನು ಮಾಡಿ ಕೃತಕ ಅಭಾವ ಸೃಷ್ಟಿಮಾಡಿ ಹೆಚ್ಚಿನ ಧರಕ್ಕೆ ಮಾರಾಟ ಮಾಡುವ ಪ್ರಯತ್ನ ಮಾಡಿದರೆ ನಿರ್ದಾಕ್ಷಿಣ್ಯವಾಗಿ ಕ್ರಮವಹಿಸಲಾಗುವುದು ಎಂದರು.

ಸಹಾಯಕ ನಿರ್ದೇಶಕರಾದ ಸುನಿಲ್ ಕುಮಾರ್ ಎಂ ಟಿ ಇವರು ಪ್ರಾಸ್ತಾವಿಕವಾಗಿ ಮಾತನಾಡಿ, ಡಿಎಪಿ ಮತ್ತು ಯೂರಿಯಾ ಸಹಿತಾ ಸಾಕಷ್ಟು ಪೂರೈಕೆ ಇದ್ದು, ರೈತರು ಯಾವುದೇ ಒಂದು ಕಂಪನಿ.ಒಂದೇ ವಿಧದ ಬೀಜ ರಸಗೊಬ್ಬರಗಳ ಮೇಲೆ ಅವಲಂಬನೆಯಾಗದೇ ಪರ್ಯಾಯ ಬೀಜ,ರಸಗೊಬ್ಬರಗಳನ್ನು ಬಳಸುವಂತೆ ಸಲಹೆ ನೀಡಿದರು.

ವೆಂಕಟಸ್ವಾಮಿ ಸಿಪಿಐ ಇವರು ಹಳ್ಳಿಗಳಲ್ಲಾಗಲೀ ಎಲ್ಲಿಯಾದರೂ ಬಂದು ಕಡಿಮೆ ಧರಕ್ಕೆ ಯಾವುದೇ ಅನುಮಿತಿ ಇಲ್ಲದೇ ಅನಧಿಕೃತವಾಗಿ ಬೀಜ ಅಥವಾ ಗೊಬ್ಬರವನ್ನು ಮಾರಾಟ ಮಾಡುತ್ತಿರುವುದು ಕಂಡುಬಂದಲ್ಲಿ ಕೂಡಲೇ ಮಾಹಿತಿ ನೀಡಿದಲ್ಲಿ ನಿಯಮಾನುಸಾರ ಪರಿಶೀಲಿಸಿ ಮುಂದೆ ರೈತರಿಗಾಗುವ ತೊಂದರೆ ತಪ್ಪಿಸಬಹುದು ಎಂದು ಸೂಚನೆ ನೀಡಿದರು.

ಈ ಸಭೆಯಲ್ಲಿ ಕು.ಅಶ್ವಿನಿ ಡಿ, ಎಹೆಚ್ಓ ತೋಟಗಾರಿಕೆ ಇಲಾಖೆ, ನೀಲಾನಾಯ್ಕ ಕೃಷಿ ಅಧಿಕಾರಿ(ತಾಂತ್ರಿಕ) ಕುಮಾರಸ್ವಾಮಿ ಕೆ ಜಾರಿದಳ, ಹೊಸಪೇಟೆ,ಕೊಟ್ಟೂರು ಸಹಾಯಕ ಕೃಷಿ ಅಧಿಕಾರಿ ಶ್ಯಾಮ್ ಸುಂದರ್,ರೈತ ಮುಖಂಡರಾದ ಭರಮಪ್ಪ, ಶ್ರೀಧರ, ಜಯಪ್ರಕಾಶನಾಯ್ಕ, ಸುರೇಶನಾಯ್ಕ , ಬೀಜ ಗೊಬ್ಬರ ವ್ಯಾಪಾರಿಗಳ ಸಂಘದ ತಾಲೂಕು ಅಧ್ಯಕ್ಷರಾದ ಶ್ರೀಧರಶೆಟ್ಟಿ ಹಾಗೂ ಇತರೆ ವ್ಯಾಪಾರಸ್ತರು ಹಾಜರಿದ್ದರು.

# ಹಂಪಿಗೆ ವಿನೋದ್ ಕಾವ್ಲೆ ಭೇಟಿ



**ಹಂಪಿ ಟೈಮ್ಸ್ ಹೊಸಪೇಟೆ**

ಇಂದು ಐತಿಹಾಸಿಕ ಹಂಪಿಗೆ ಕೇಂದ್ರ ಸರ್ಕಾರದ ಸಮಾಜ ಕಲ್ಯಾಣ ಸಚಿವಾಲಯದ ಕಾರ್ಯದರ್ಶಿಗಳು ಹಾಗೂ ಕೇಂದ್ರದ ಹಿರಿಯ ಐಎಎಸ್ ಅಧಿಕಾರಿ ವಿನೋದ್ ಕಾವಳೆ ಅವರು ಕುಟುಂಬದೊಂದಿಗೆ ಭೇಟಿ ನೀಡಿ ವೀಕ್ಷಿಸಿ, ವಿಜಯನಗರ ಸಾಮ್ರಾಜ್ಯದ ಶ್ರೀಮಂತ ಕಲೆ ಮತ್ತು ಸಂಸ್ಕೃತಿಗೆ ಬೆರೆಗಾದರು. ವಿಜಯ ವಿಠಲ ದೇವಸ್ಥಾನ, ರಾಣಿ ಸ್ನಾನ ಗೃಹ, ಉಗ್ರ ನರಸಿಂಹ, ಬಡವಿ ಲಿಂಗ, ಕಮಲ್ ಮಹಲ್, ಗಜ ಶಾಲೆ, ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನದ ವಾಸ್ತುಶಿಲ್ಪ, ಸಂರಕ್ಷಣೆಯನ್ನು ಕುತೂಹಲದಿಂದ ವೀಕ್ಷಿಸಿದರು.

ಜಿ–20 ಯ ಕೇಂದ್ರ ಬಿಂದುವಾದ ಕೋದಂಡರಾಮ ಬಳಿ ಇರುವ ತುಂಗಭದ್ರ ನದಿ ಹರಿಗೋಲು ತೆಪ್ಪದಲ್ಲಿ ಸುತ್ತಾಡಿ, ಪ್ರಕೃತಿಯ ಸೊಬಗನ್ನು ಸವಿದರು, ಈ ಸಂದರ್ಭದಲ್ಲಿ ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ ಪ್ರಭುಲಿಂಗ ಎಸ್ ತಳಕೇರಿ ಶಿಷ್ಟಾಚಾರದ ಪ್ರಕಾರ ಐತಿಹಾಸಿಕ ಹಂಪಿಗೆ ಸ್ವಾಗತಿಸಿದರು. ಕೆಎಸ್‌ಟಿಡಿಸಿ ವ್ಯವಸ್ಥಾಪಕ ಸುನಿಲ್ ಕುಮಾರ್, ಮಂಜುನಾಥ ಗೌಡ ಹಂಪಿಯ ಸ್ಮಾರಕಗಳ ಐತಿಹ್ಯವನ್ನು ತಿಳಿಸಿದರು. ಮಾರ್ಗದರ್ಶಕ ವಿರುಪಾಕ್ಷಿ ವಿ ಹಂಪಿ ಸನ್ಮಾನಿಸಿದರು.

# ಕ್ಷಯಮುಕ್ತ ಸಮಾಜ ನಿರ್ಮಿಸಲು ಸಹಕರಿಸಿ

### ಮೇಲ್ವಿಚಾರಕ ಕಾಸಿಂ ಸಾಬ್ ಹೇಳಿಕೆ । ಕ್ಷಯರೋಗಿಗಳ ಅರೋಗ್ಯ ತಪಾಸಣಾ ಶಿಬಿರ

**ಹಂಪಿ ಟೈಮ್ಸ್ ಹೊಸಪೇಟೆ**



ಭಾರತವನ್ನು 2025ರ ವೇಳೆಗೆ ಕ್ಷಯಮುಕ್ತ ದೇಶವನ್ನಾಗಿಸಲು ಗುರಿಹೊಂದಿದ್ದು, ಗುರಿಸಾಧನೆಗೆ ಸಮುದಾಯದ ಪ್ರತಿಯೊಬ್ಬರ ಸಹಕಾರ ಅತ್ಯಗತ್ಯ ಎಂದು ಕ್ಷಯರೋಗ ಮೇಲ್ವಿಚಾರಕ ಕಾಸಿಂಸಾಬ್ ಹೇಳಿದರು.

ನಗರದ ಜಂಬುನಾಥರಸ್ತೆಯ ನಗರದ ಆರೋಗ್ಯ ಕೇಂದ್ರದಲ್ಲಿ ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವಿಜಯನಗರ ಮತ್ತು ಜಿಲ್ಲಾ ಕ್ಷಯರೋಗ ನಿರ್ಮೂಲನ ಕೇಂದ್ರ ಮತ್ತು ತಾಲೂಕು ಅರೋಗ್ಯಧಿಕಾರಿಗಳ ಕಚೇರಿ ಹೊಸಪೇಟೆ ವತಿಯಿಂದ ಹಮ್ಮಿಕೊಂಡಿದ್ದ ಕ್ಷಯರೋಗಿಗಳ ಅರೋಗ್ಯ ತಪಾಸಣಾ ಶಿಬಿರದಲ್ಲಿ ಬುಧವಾರ ಮಾತನಾಡಿದರು. ಆರೋಗ್ಯ ಕುರಿತು ನಿರ್ಲಕ್ಷ್ಯ ಮಾಡಬಾರದು. ಸರ್ಕಾರದ ಯೋಜನೆಗಳ ಸದುಪಯೋಗಪಡಿಸಿಕೊಂಡು ಆರೋಗ್ಯವಂತರಾಗಿ ಬಾಳಬೇಕು. ಅನೇಕ ಚಿಕಿತ್ಸೆಗಳು ಸರ್ಕಾರದ ಆಸ್ಪತ್ರೆಗಳಲ್ಲಿ ಉಚಿತವಾಗಿ ಲಭಿಸುತ್ತದೆ ಎಂಬುದನ್ನು ತಾವು ಅರಿತುಕೊಂಡು, ತಮ್ಮ ಸುತ್ತಮುತ್ತಲಿನ ಜನರಿಗೂ ಅರಿವು ಮೂಡಿಸುವ ಮೂಲಕ ಆರೋಗ್ಯ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದರು.

ನಗರ ಅರೋಗ್ಯ ಕೇಂದ್ರದ ವ್ಯಧ್ಯಾದಿಕಾರಿ ಡಾ. ಭುವನ ಮಾತನಾಡಿ, ಎರಡು ವಾರಕಿಂತ ಹೆಚ್ಚು ಕೆಮ್ಮು. ಕಫದಲ್ಲಿ ರಕ್ತ ಬೀಳುವುದು, ಕ್ರಮೇಣ ತೂಕ ಕಡಿಮೆ ಆಗುವುದು, ಹಸಿವು ಅಗೆದೆ ಇರುವುದು, ರಾತ್ರಿವೇಳೆಯಲ್ಲಿ ಬೆವರುವುದು, ಎದೆಯಲ್ಲಿ ನೋವು ಕಾಣಿಸಿಕೊಳ್ಳುವುದು, ಸಂಜೆವೇಳೆಯಲ್ಲಿ ಜ್ವರ ಬರುವುದು, ಇನ್ನಿತರ ಲಕ್ಷಣಗಳು ಕಂಡು ಬಂದರೆ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಉಚಿತವಾಗಿ ಕಫ ಪರೀಕ್ಷೆ ಮಾಡಿಸಿಕೊಳ್ಳಬೇಕು.

ಕ್ಷಯ ದೃಡಪಟ್ಟರೆ ಆಪ್ತ ಸಮಾಲೋಚನೆ ಮಾಡಿ ಉಚಿತವಾಗಿ ಮಾತ್ರೆ ಕೊಡಲಾಗುವುದು. ಜೊತೆಗೆ ನಿಕ್ಷಯ ಪೋಷನ್ ಯೋಜನೆ ಅಡಿಯಲ್ಲಿ ಪೌಷ್ಟಿಕ ಆಹಾರ ಸೇವನೆಗಾಗಿ ಪ್ರತಿ ತಿಂಗಳ ಐದುನೂರ ರೂ. ತಮ್ಮ ಖಾತೆಗೆ ಹಾಕಲಾಗುವುದು ಎಂದು ಮಾಹಿತಿ ನೀಡಿದರು.

ಈ ಕಾರ್ಯಕ್ರಮದಲ್ಲಿ ಪಿಎಚ್‌ಸಿಓ ಉಮಾ ದೇವಿ, ಎಚ್‌ಐಓ ಯಶೋಧ, ಫಾರ್ಮಸಿ ಅಧಿಕಾರಿ ಐಶ್ವರ್ಯ, ಎಲ್ ಟಿ ಓ ರಾಜು ಮತ್ತು ಅರೋಗ್ಯ ಸಿಬ್ಬಂದಿ ಇದ್ದರು.

## ವಿಜ್ಞಾನ

# ಚಂದ್ರ ಏಕೆ ತುಂಬಾ ಪ್ರಕಾಶಮಾನವಾಗಿದೆ?

**ಆರ್.ಬಿ.ಗುರುಬಸವರಾಜ**

ತರಗತಿಯಲ್ಲಿ ಶಿಕ್ಷಕರು ಸ್ವಯಂ ಪ್ರಕಾಶಿತ ವಸ್ತುಗಳ ಬಗ್ಗೆ ಪಾಠ ಮಾಡುತ್ತಿದ್ದರು. ಚಂದ್ರನು ಸ್ವಯಂ ಪ್ರಕಾಶವಲ್ಲದ ಆಕಾಶ ಕಾಯ ಎಂದು ಎಂದು ಹೇಳಿದರು. ತಕ್ಷಣವೇ ಸುರಭಿ ಎದ್ದು ನಿಂತು "ಮೇಡಂ, ಹಾಗಾದರೆ ಚಂದ್ರ ಏಕೆ ತುಂಬಾ ಪ್ರಕಾಶಮಾನವಾಗಿದೆ?" ಎಂದಳು. ವಿಜ್ಞಾನ ಶಿಕ್ಷಕಿಯು ಅವಳ ಪ್ರಶ್ನೆಗೆ ಹೀಗೆ ಉತ್ತರಿಸಿದರು. ಸದ್ಯ ನಮ್ಮ ಸೌರವ್ಯೂಹದಲ್ಲಿ ಸೂರ್ಯನನ್ನು ಬಿಟ್ಟರೆ ಪ್ರಕಾಶಮಾನವಾದ ಆಕಾಶಕಾಯ ಎಂದರೆ ಚಂದ್ರ ಮಾತ್ರ. ಚಂದ್ರನಿಗೆ ಸೂರ್ಯನಂತೆ ಸ್ವಂತ ಬೆಳಕಿಲ್ಲ. ಆದರೂ ಪ್ರಕಾಶಮಾನವಾಗಿ ಹೇಗೆ ಹೊಳೆಯುತ್ತದೆ? ಚಂದ್ರನು ಸೂರ್ಯನ ಬೆಳಕನ್ನು ಪ್ರತಿಫಲಿಸುವ ಕಾರಣ



ಪ್ರಕಾಶಮಾನವಾಗಿ ಗೋಚರಿಸುತ್ತಾನೆ. ಸೂರ್ಯನ ಬೆಳಕು ಚಂದ್ರನ ಮೇಲ್ಮೈ ಮೇಲೆ ಬಿದ್ದಾಗ, ಅದರಲ್ಲಿ ಕೆಲವು ಬೆಳಕು ಹೀರಲ್ಪಡುತ್ತದೆ. ಆದರೆ ಅದರ ಗಮನಾರ್ಹ ಭಾಗವು ಭೂಮಿಯ ಕಡೆಗೆ ಪ್ರತಿಫಲಿಸುತ್ತದೆ. ಇದರಿಂದ ಚಂದ್ರನು ಪ್ರಕಾಶಮಾನವಾಗಿ ಕಾಣಿಸುತ್ತಾನೆ.

ಚಂದ್ರನ ಮೇಲ್ಮೈಯು ಸೂಕ್ಷ್ಮವಾದ ಧೂಳು ಮತ್ತು ಬಂಡೆಗಳ ಪದರದಿಂದ ಆವೃತ್ತವಾಗಿದೆ. ಅಂತೆಯೇ ಚಂದ್ರನ ಮೇಲ್ಮೈಯು ರೆಗೊಲಿತ್ ಎಂದು ಕರೆಯಲ್ಪಡುವ ಸೂಕ್ಷ್ಮವಾದ ಪುಡಿಯ ವಸ್ತುಗಳಿಂದ ಆವರಿಸಿದೆ. ಇದು ಸೂರ್ಯನ ಬೆಳಕನ್ನು ಬಹಳ ಪರಿಣಾಮಕಾರಿಯಾಗಿ ಪ್ರತಿಫಲಿಸುತ್ತದೆ. ಅದಕ್ಕಾಗಿಯೇ ಚಂದ್ರನು ತನ್ನದೇ ಆದ ಬೆಳಕನ್ನು ಹೊಂದಿಲ್ಲದಿದ್ದರೂ ಸಹ ಪ್ರಕಾಶಮಾನವಾಗಿ ಕಾಣುತ್ತಾನೆ.

ಚಂದ್ರನ ಹೊಳಪು ಅದರ ಹಂತ ಮತ್ತು ಅದರ ಕಕ್ಷೆಯಲ್ಲಿ ಚಂದ್ರನ ಸ್ಥಾನವನ್ನು ಅವಲಂಬಿಸಿ ಬದಲಾಗಬಹುದು. ಪೂರ್ಣ ಚಂದ್ರನು ಸೂರ್ಯನಿಗೆ ನೇರವಾಗಿ ಎದುರಾಗಿರುವ ಕಾರಣ ಪ್ರಕಾಶಮಾನವಾಗಿ ಗೋಚರಿಸುತ್ತಾನೆ. ಹುಣ್ಣಿಮೆಯ ಸಮಯದಲ್ಲಿ, ಚಂದ್ರನು ಸೂರ್ಯನಿಗಿಂತ 400,000 ಪಟ್ಟು ಮಂದವಾಗಿರುತ್ತದೆ. ಆದಾಗ್ಯೂ ಅದು ರಾತ್ರಿ ಆಕಾಶದಲ್ಲಿ ತುಂಬಾ ಪ್ರಕಾಶಮಾನವಾಗಿ ಕಾಣುತ್ತದೆ. ಅಂತೆಯೇ ಅರ್ಧಚಂದ್ರಾಕೃತಿಯು ಕಡಿಮೆ ಪ್ರಕಾಶಮಾನವಾಗಿ ಕಾಣುತ್ತದೆ ಏಕೆಂದರೆ ಅದರ ಮೇಲ್ಮೈಯ ಒಂದು ಭಾಗವು ಮಾತ್ರ ಸೂರ್ಯನ ಬೆಳಕನ್ನು ಪಡೆದಿರುತ್ತದೆ. ಚಂದ್ರನ ಮೇಲ್ಮೈಯು ಪರ್ವತಗಳು, ಕಣಿವೆಗಳು ಮತ್ತು ಕುಳಿಗಳೊಂದಿಗೆ ತುಂಬಾ ಒರಟಾಗಿದೆ. ಇದು ಚಂದ್ರನ ವೈಶಿಷ್ಟ್ಯಗಳ ಹೊಳಪು ಮತ್ತು ವ್ಯತಿರಿಕ್ತತೆಯನ್ನು ಹೆಚ್ಚಿಸುವ ನೆರಳುಗಳನ್ನು ರಚಿಸಬಹುದು.

# ಸುರಕ್ಷಿತ ಪ್ರಯಾಣಕ್ಕೆ ರೈಲು ಸಂಚಾರ ಪುನರಾರಂಭಿಸಿ

ಮೊದಲ ಪುಟದಿಂದ

ಹುಬ್ಬಳ್ಳಿ–ಗುಂತಕಲ್ ನಡು ನಡುವೆ ಸಂಚರಿಸುತ್ತಿದ್ದ ಗಾಡಿ ಸಂಖ್ಯೆ : 07337/07338 ಕಳೆದ ಒಂದು ತಿಂಗಳಿಂದ ಯಾವುದೇ ಕಾರಣ ನೀಡದೆ ತೋರಣಗಲ್‌ವರೆಗೆ ಮಾತ್ರ ಸಂಚರಿಸುತ್ತಿದ್ದು ಪ್ರತಿನಿತ್ಯ ಬಳ್ಳಾರಿಗೆ ಹೋಗುವ/ಬರುವ ಪ್ರಯಾಣಿಕರಿಗೆ ತೊಂದರೆ ಯಾಗಿದೆ. ಈ ರೈಲನ್ನು ಮೊದಲಿನಂತೆ ಸಂಚಾರ ಆರಂಭಿಸಬೇಕು.

ಹುಬ್ಬಳ್ಳಿ–ವಿಜಯವಾಡ ನಡುವೆ ರಾತ್ರಿ ಸಂಚರಿಸುತ್ತಿದ್ದ ರೈಲು ಸಂಖ್ಯೆ : 17329/17330 ಒಂದು ತಿಂಗಳಿಂದ ನಿಲುಗಡೆಯಾಗಿದ್ದೂ ಕೂಡಲೇ ಪುನರಾರಂಭಿಸಬೇಕೆಂದು ಒತ್ತಾಯಿಸಿದ್ದಾರೆ. ಈ ಸಂಧರ್ಭದಲ್ಲಿ ರೈಲ್ವೆ ಸಲಹಾ ಸಮಿತಿಯ ಹಿರಿಯ ಸದಸ್ಯರಾದ ಆದೆಪ್ಪ ಗೌಡ್ರು ಇದ್ದರು.

# ವಿಶ್ವ ತಂಬಾಕು ರಹಿತ ದಿನಾಚರಣೆ ಮೇ 31 ರಂದು ಜಾಗೃತಿ ಜಾಥ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಘಟಕ ವತಿಯಿಂದ 'ವಿಶ್ವ ತಂಬಾಕು ರಹಿತ ದಿನಾಚರಣೆ' ಹಾಗೂ 'ಗುಲಾಬಿ ಆಂದೋಲನ' ಅಂಗವಾಗಿ "ತಂಬಾಕು ಉದ್ಯಮದ ಹಸ್ತಕ್ಷೇಪದಿಂದ ಮಕ್ಕಳನ್ನು ರಕ್ಷಿಸುವುದು" ಎಂಬ ಘೋಷವಾಕ್ಯದಡಿ ಮೇ 31 ರಂದು ಬೆಳಿಗ್ಗೆ 9 ಗಂಟೆಗೆ ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಆವರಣದಿಂದ ಜಾಗೃತಿ ಜಾಥ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಕಾರ್ಯಕ್ರಮ ಅಧಿಕಾರಿ ಹಾಗೂ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ತಿಳಿಸಿದ್ದಾರೆ.

ತಂಬಾಕು ಉತ್ಪನ್ನಗಳ ಉಪಯೋಗದಿಂದ ಉಂಟಾಗುವ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸುವ ಈ ಜಾಥಾಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಧೀಶರಾದ ರಾಜೇಶ್.ಎನ್ ಹೊಸಮನೆ ಚಾಲನೆ ನೀಡುವರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA

# ಹಂಪಿ ಟೈಮ್ಸ್
# HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY








ಸಂಪುಟ:01 • ಸಂಚಿಕೆ:327 • ನೋಂದಣಿ ನಂ.:KARKAN27911 • ವಿಜಯನಗರ • 30.05.2024 • ಗುರುವಾರ • ಪುಟ:04 • ಬೆಲೆ:2
Volume:01 • Issue:327 • Reg.No:KARKAN27911 • VIJAYANAGARA • 30.05.2024 • Thursday • Page:04 • Rs:2


**ಮೈಕ್ರೋ ನ್ಯೂಸ್**

## ದೈಹಿಕ ಶಿಕ್ಷಣ ಅತಿಥಿ ಶಿಕ್ಷಕರ ಹುದ್ದೆಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**
ಅಲ್ಪಸಂಖ್ಯಾತರ ಸರಕಾರಿ ಮೌಲಾನಾ ಆಜಾದ್ ಮಾದರಿ ಆಂಗ್ಲ ಮಾಧ್ಯಮ ಶಾಲೆ ಹೊಸಪೇಟೆ ಶಾಲೆಯಲ್ಲಿ 6 ರಿಂದ 10ರವರೆಗೆ ತರಗತಿಗಳು ನಡೆಯಲಿವೆ.
ಈ ಶಾಲೆಯಲ್ಲಿ ದೈಹಿಕ ಶಿಕ್ಷಣ ಅತಿಥಿ ಶಿಕ್ಷಕರ ಹುದ್ದೆ ಖಾಲಿಯಾಗಿದ್ದು, ಆಸಕ್ತ ಬಿ.ಎ ಬಿ.ಪಿ.ಎಡ್ ಪದವೀಧರರು ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಜೂನ್ 5 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ.9964732718ಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರಾಂಶುಪಾಲರಾದ ಮಂಜುನಾಥ ಪಾಟೀಲ್ ಅವರು ತಿಳಿಸಿದ್ದಾರೆ.

## ಮೌಲಾನಾ ಆಜಾದ್ ಆಂಗ್ಲಮಾಧ್ಯಮ ಶಾಲೆಗೆ ಜೂನ್ 1 ಕ್ಕೆ ಪ್ರವೇಶ ಪರೀಕ್ಷೆ

**ಹಂಪಿ ಟೈಮ್ಸ್ ಹೊಸಪೇಟೆ**
2024-25ನೇ ಶೈಕ್ಷಣಿಕ ಸಾಲಿನಲ್ಲಿ ಅಲ್ಪಸಂಖ್ಯಾತರ ಸರಕಾರಿ ಮೌಲಾನಾ ಆಜಾದ್ ಮಾದರಿ ಆಂಗ್ಲ ಮಾಧ್ಯಮ ಶಾಲೆ ಹೊಸಪೇಟೆ ಶಾಲೆಯಲ್ಲಿ 6ನೇ ತರಗತಿಯಿಂದ 9ನೇ ತರಗತಿಯವರೆಗಿನ ದಾಖಲಾತಿ ಪ್ರಕ್ರಿಯೆ ಆರಂಭವಾಗಿರುತ್ತದೆ.
ಈ ಶಾಲೆಗಳು ಆಂಗ್ಲ ಮಾಧ್ಯಮ ಶಾಲೆಗಳಾಗಿದ್ದು, 2022-23ನೇ ಸಾಲಿನಲ್ಲಿ ಶೇಕಡಾ 100ರಷ್ಟು ಫಲಿತಾಂಶ ದಾಖಲಿಸಿವೆ. ಉತ್ತಮ ಅನುಭವಿ ಶಿಕ್ಷಕರು ಸ್ಮಾರ್ಟ್‌ಕ್ಲಾಸ್ ಮೂಲಕ ಬೋಧನೆ ಮಾಡುತ್ತಾರೆ. ಬಟ್ಟೆ (ಶಾಲಾ ಸಮವಸ್ತ್ರ), ಬ್ಯಾಗ್, ಪಠ್ಯಪುಸ್ತಕ, ಕಲಿಕಾ ಸಾಮಗ್ರಿಗಳು ಸೇರಿದಂತೆ ಶಾಲೆಗೆ ಮಗು ತೆಗೆದುಕೊಂಡು ಬರುವ ಬಹುತೇಕ ಎಲ್ಲಾ ಕಲಿಕಾ ಸಾಮಗ್ರಿಗಳನ್ನು ಉಚಿತವಾಗಿ ನೀಡಲಾಗುತ್ತದೆ. ಜೂನ್ 1ರ ಶನಿವಾರದಂದು ಪ್ರವೇಶ ಪರೀಕ್ಷೆ ಇದ್ದು, ಆಸಕ್ತರು ಮೌಲಾನಾ ಆಜಾದ್ ಮಾದರಿ ಶಾಲೆ ಹೊಸಪೇಟೆ ಶಾಲೆಗೆ ಭೇಟಿ ನೀಡಿ ಪ್ರವೇಶ ಪರೀಕ್ಷೆಗೆ ಹಾಜರಾಗಬಹುದು. ಹೆಚ್ಚಿನ ಮಾಹಿತಿಗಾಗಿ 9945951963, 9632383157, 7259651119 ಸಂಪರ್ಕಿಸಿ.

## ತೋಟಗಾರಿಕಾ ಯೋಜನೆಗಳಿಗೆ ರೈತರಿಂದ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**
ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲೂಕಿನ ತೋಟಗಾರಿಕೆ ಇಲಾಖಾ ಕಚೇರಿಯಿಂದ 2024-25ನೇ ಸಾಲಿನಲ್ಲಿ ಅನುಷ್ಠಾನಗೊಳಿಸುವ ಯೋಜನೆಗಳಿಗೆ ಅರ್ಹ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ.
ರಾಷ್ಟ್ರೀಯ ತೋಟಗಾರಿಕೆ ಮಿಷನ್, ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ (ಹನಿ ನೀರಾವರಿ) ಯೋಜನೆ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಯಾಂತ್ರೀಕರಣ ಯೋಜನೆ ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗಳಿಗೆ ರೈತ ಭಾಂದವರು ಅರ್ಜಿ ಸಲ್ಲಿಸಬಹುದಾಗಿದೆ. ಖಾಯಂ ನೀರಾವರಿ ಸೌಲಭ್ಯವಿರುವ ಹಾಗೂ ತೋಟಗಾರಿಕೆ ಬೆಳೆ ಹೊಂದಿರುವ ಮತ್ತು ಬೆಳೆಯಲು ಆಸಕ್ತಿ ಹೊಂದಿರುವ ರೈತರು 2024 ಜೂನ್ 25ರೊಳಗಾಗಿ ಅಗತ್ಯ ದಾಖಲಾತಿಯೊಂದಿಗೆ ತೋಟಗಾರಿಕೆ ಇಲಾಖೆ ಕಚೇರಿಗೆ ಅರ್ಜಿ ಸಲ್ಲಿಸಲು ರೈತ ಭಾಂದವರಲ್ಲಿ ವಿನಂತಿಸಿದೆ. ಹೆಚ್ಚಿನ ಮಾಹಿತಿಗಾಗಿ ಹೂವಿನ ಹಡಗಲಿಯ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿಗಳು ಹಾಗೂ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರನ್ನು ಸಂಪರ್ಕಿಸಿ.

# ಸಸ್ಯಗಳ ಸಮೃದ್ಧ ಬೆಳವಣಿಗೆಗೆ ಸಮತೋಲನಾತ್ಮಕ ರಸಗೊಬ್ಬರ ಬಳಸಿ

**ಹಂಪಿ ಟೈಮ್ಸ್ ಹೊಸಪೇಟೆ**
ಸಸ್ಯಗಳ ಸಮೃದ್ಧ ಬೆಳವಣಿಗೆಗೆ ರೈತರು ಸಮತೋಲನಾತ್ಮಕ ರಸಗೊಬ್ಬರಗಳ ಬಳಕೆ ಮಾಡಬೇಕು ಎಂದು ಜಂಟಿ ಕೃಷಿ ನಿರ್ದೇಶಕರು ಸಲಹೆ ನೀಡಿದ್ದಾರೆ.

ಸಸ್ಯಗಳ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಹದಿನೇಳು ಪೋಷಕಾಂಶಗಳ ಅಗತ್ಯವಿರುತ್ತದೆ. ಇವುಗಳಲ್ಲಿ ಇಂಗಾಲ, ಜಲಜನಕ ಮತ್ತು ಆಮ್ಲಜನಕವು ಸ್ವಾಭಾವಿಕವಾಗಿ ದೊರೆಯಲಿದ್ದು, ಗಾಳಿ ಮತ್ತು ನೀರಿನ ಮೂಲಕ ಸಸ್ಯಗಳಿಗೆ ಲಭ್ಯವಾಗುತ್ತವೆ. ಉಳಿದ ಹದಿನಾಲ್ಕು ಪೋಷಕಾಂಶಗಳಲ್ಲಿ ಸಾರಜನಕ, ರಂಜಕ, ಪೊಟ್ಯಾಷ್ ಹೆಚ್ಚಿನ ಪ್ರಮಾಣದಲ್ಲಿ ಬೇಕಿದ್ದು ಇವುಗಳನ್ನು ಪ್ರಧಾನ ಪೋಷಕಾಂಶಗಳೆಂದು, ಕ್ಯಾಲ್ಸಿಯಂ, ಮೆಗ್ನೆಷಿಯಂ, ಗಂಧಕ, ಕಬ್ಬಿಣ, ಜಿಂಕ್, ಬೋರಾನ್, ತಾಮ್ರ, ಮ್ಯಾಂಗನೀಸ್, ಮಾಲಿಬಿನಂ ಕ್ಲೋರಿನ್ ಮತ್ತು ನಿಕಲ್ ಕಡಿಮೆ ಪ್ರಮಾಣದಲ್ಲಿ ಬೇಕಿದ್ದು ಇವುಗಳನ್ನು ಲಘುಪೋಷಕಾಂಶಗಳೆಂದು ವಿಂಗಡಿಸಲಾಗಿದೆ.

ಇವುಗಳಲ್ಲಿ ಯಾವುದೇ ಒಂದು ಪೋಷಕಾಂಶದ ಕೊರತೆಯಾದರೂ ಸಸ್ಯಗಳ ಬೆಳವಣಿಗೆ ಮತ್ತು ಅಭಿವೃದ್ಧಿಯ ಮೇಲೆ ಪರಿಣಾಮ ಬೀರಿ ಇಳುವರಿ ಕುಂಠಿತವಾಗುತ್ತದೆ. ಪ್ರಧಾನ ಪೋಷಕಾಂಶಗಳು ಮತ್ತು ಲಘುಪೋಷಕಾಂಶಗಳಿಗೆ ಭೂಮಿಯೇ ಮುಖ್ಯ ಆಧಾರ. ಮಣ್ಣಿನಿಂದ ಈ ಎಲ್ಲಾ ಪೋಷಕಾಂಶಗಳು ಬೆಳೆಗಳಿಗೆ ಬೇಕಾದ ಪ್ರಮಾಣ ದಲ್ಲಿ ದೊರೆಯುವುದಿಲ್ಲವಾದ್ದರಿಂದ ಬಾಹ್ಯವಾಗಿ ನೀಡುವುದು ಅನಿವಾರ್ಯ. ಬೆಳೆಗಳಿಗೆ ಬೇಕಾಗುವ ಈ ಬಾಹ್ಯಪೋಷಕಾಂಶಗಳನ್ನು ಸಾವಯವ (ಕೊಟ್ಟಿಗೆ ಗೊಬ್ಬರ,



ಹಸಿರೆಲೆಗೊಬ್ಬರ, ಹಿಂಡಿ ಇತ್ಯಾದಿ) ಮತ್ತು ರಸಗೊಬ್ಬರಗಳಿಂದ ಒದಗಿಸಬೇಕಾಗಿದ್ದು, ರಸಗೊಬ್ಬರಗಳಲ್ಲಿ ಪೋಷಕಾಂಶಗಳು ಹೆಚ್ಚಿನ ಪ್ರಮಾಣದಲ್ಲಿ ಮತ್ತು ನೇರವಾಗಿ ದೊರೆಯುವ ರೂಪದಲ್ಲಿದ್ದು ಅವುಗಳ ಬಳಕೆಯನ್ನು ರೈತರು ಹೆಚ್ಚಾಗಿ ಮಾಡಲು ಕೋರಿದೆ.

ರೈತರು ಕೇವಲ ಒಂದು ಅಥವಾ ಎರಡು ಪೋಷಕಾಂಶ ಒದಗಿಸುವ ಯೂರಿಯಾ ಹಾಗೂ ಡಿಎಪಿಯನ್ನು ರೂಢಿಗತವಾಗಿ ಬಳಸುತ್ತಿದ್ದು, ಇವುಗಳಲ್ಲಿ ಸಾರಜನಕ ಮತ್ತು ರಂಜಕದ ಅಂಶ ಮಾತ್ರವಿರುತ್ತದೆ. ಆದರೆ, ಬೆಳೆಗಳಿಗೆ ಬರ ಮತ್ತು ರೋಗನಿರೋಧಕ ಶಕ್ತಿ ನೀಡಿ ಕಾಳಿನ ತೂಕ ಹೆಚ್ಚಿಸಲು ಅತ್ಯಂತ ಅವಶ್ಯಕವಾಗಿರುವ ಪೊಟ್ಯಾಷ್ ಲಭ್ಯವಿರುವುದಿಲ್ಲ. ಮಾರುಕಟ್ಟೆಯಲ್ಲಿ ವಿವಿಧ ಶ್ರೇಣಿಯ (ಗ್ರೇಡ್) ಸಾರಜನಕ, ರಂಜಕ ಮತ್ತು ಪೊಟ್ಯಾಷ್ ಯುಕ್ತ ಬಹಳಷ್ಟು ರಸಗೊಬ್ಬರಗಳು ಲಭ್ಯವಿದ್ದು, ಶಿಫಾರಸ್ಸಿನಂತೆ ವಿವಿಧ ರಸಗೊಬ್ಬರಗಳ ಸಂಯೋಜನೆಯೊಂದಿಗೆ ಬಳಸಬಹುದಾಗಿದೆ.

ಶಿಫಾರಸ್ಸಿನಂತೆ ಬೆಳೆಗಳಿಗೆ ಸಾರಜನಕ ರಂಜಕ, ಪೊಟ್ಯಾಷ್ ರಸಗೊಬ್ಬರಗಳನ್ನು 4: 2: 1ರ ಅನುಪಾತದಲ್ಲಿ ಬಳಸಬೇಕಾಗಿರುತ್ತದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ರೈತರು ಬಳಸುತ್ತಿರುವ ರಸಗೊಬ್ಬರಗಳ ಅನುಪಾತವು ರಾಜ್ಯದಲ್ಲಿ 5:3:1 ಆಗಿರುತ್ತದೆ.

ರೈತರು ರಸಗೊಬ್ಬರವನ್ನು ಕೇವಲ ಒಂದೇ ಸಂಸ್ಥೆಯ ಅಥವಾ ಒಂದೇ ರಸಗೊಬ್ಬರಕ್ಕೆ ಆದ್ಯತೆ ನೀಡದೆ, ಡಿ.ಎ.ಪಿ ರಸಗೊಬ್ಬರಕ್ಕೆ ಪರ್ಯಾಯವಾಗಿ ಗಂಧಕ ಒದಗಿಸುವ 20:20:0:13 ಹಾಗೂ ಪೊಟ್ಯಾಷ್ ಒದಗಿಸುವ ಇತರೆ ಸಂಯುಕ್ತ ರಸಗೊಬ್ಬರಗಳಾದ 15:15:15., 10.26.26., 12:32:16., 22:22:11., 14:35:14., 17:17:17., 14:28:14., 19:19:19., 20:10:10 ಇತ್ಯಾದಿ ರಸಗೊಬ್ಬರಗಳನ್ನೂ ಸಹ ಬಳಸಬಹುದಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಪೋಷಕಾಂಶದ ಕೊರತೆಯಾದರೂ ಸಸ್ಯಗಳ ಬೆಳವಣಿಗೆ, ಇಳುವರಿ ಕುಂಠಿತ**
**ಡಿಎಪಿಯಲ್ಲಿ ಪೊಟ್ಯಾಷ್ ಕೊರತೆ**
**ಶಿಫಾರಸ್ಸಿನಂತೆ ರಸಗೊಬ್ಬರ ಬಳಸಿ**
**ಒಂದೇ ತೆರನಾದ ರಸಗೊಬ್ಬರ ಬಳಕೆ ಒಳಿತಲ್ಲ**
**ಸಂಯುಕ್ತ ಗೊಬ್ಬರ ಬಳಕೆಗೆ ಆದ್ಯತೆ ನೀಡಿ**
**ಕೊಟ್ಟಿಗೆ ಗೊಬ್ಬರ, ಹಸಿರೆಲೆಗೊಬ್ಬರ, ಹಿಂಡಿ ಇತ್ಯಾದಿ ರಸಗೊಬ್ಬರಗಳಲ್ಲಿ ಪೋಷಕಾಂಶಗಳು ಹೆಚ್ಚಿನ ಪ್ರಮಾಣ ಇವೆ.**

# ಸುರಕ್ಷಿತ ಪ್ರಯಾಣಕ್ಕೆ ರೈಲು ಪುನರಾರಂಭಿಸಿ

## ಸಲಹಾ ಸಮಿತಿ ಹಿರಿಯ ಸದಸ್ಯ ಬಾಬುಲಾಲ್ ಜೈನ್‌ರಿಂದ ರೈಲ್ವೆ ಅಧಿಕಾರಿಗೆ ಮನವಿ



**ಹಂಪಿ ಟೈಮ್ಸ್ ಹೊಸಪೇಟೆ**
ಹೊಸಪೇಟೆಯಿಂದ ಬಳ್ಳಾರಿ ಮತ್ತು ಹೈದ್ರಾಬಾದ್ ಕಡೆಗೆ ತೆರಳುತ್ತಿದ್ದ ರೈಲು ಸಂಚಾರ ಸ್ಥಗಿತಗೊಳಿಸಿದ್ದರಿಂದ ಉತ್ತರ ಕರ್ನಾಟಕದ ರೈಲ್ವೆ ಪ್ರಯಾಣಿಕರಿಗೆ ತೀವ್ರ ತೊಂದರೆಯುಂಟಾಗಿದೆ. ಕೂಡಲೇ ಪ್ರಯಾಣಿಕರ ಸುರಕ್ಷಿತ ಪ್ರಯಾಣಕ್ಕಾಗಿ ಸ್ಥಗಿತಗೊಳಿಸಿದ ಮೂರು ರೈಲುಗಳನ್ನು ಪುನರರಾಂಭಿಸಬೇಕೆಂದು ಒತ್ತಾಯಿಸಿ ನೈರುತ್ಯ ರೈಲ್ವೆ ವಲಯ ಬಳಕೆದಾರರ ಸಲಹಾ ಸಮಿತಿಯ ಹಿರಿಯ ಸದಸ್ಯರಾದ ಬಾಬುಲಾಲ್ ಜೈನ್ ಅವರು ಬುಧವಾರ ಹುಬ್ಬಳ್ಳಿಯಲ್ಲಿ ವಲಯ ಪ್ರಧಾನ ವ್ಯವಸ್ಥಾಪಕರನ್ನು ಭೇಟಿ ಮಾಡಿ ರೈಲ್ವೇ ಬೇಡಿಕೆಗಳ ಮನವಿ ಸಲ್ಲಿಸಿದರು.

**ಬೇಡಿಕೆಗಳು:**
ಕೋವಿಡ್ ಪೂರ್ವದಲ್ಲಿ ಕೊಲ್ಹಾಪುರ-ಹೈದರಬಾದ್ ನಡುವೆ ಖಾಯಂ ಆಗಿ ಸಂಚರಿಸುತ್ತಿದ್ದ ಈ ರೈಲನ್ನು ಕೋವಿಡ್ ನಂತರ ಬೆಳಗಾವಿ-ಹುಬ್ಬಳ್ಳಿ-ಹೊಸಪೇಟೆ-ಹೈದರಬಾದ-ಭದ್ರಾಚಲಂ ಗಾಡಿ ಸಂಖ್ಯೆ : 07335/36 ನಡುವೆ ವಿಶೇಷ ರೈಲಾಗಿ ಪರಿವರ್ತಿಸಿ ಈಗ ಸಂಚಾರ ನಿಲ್ಲಿಸಲಾಗಿದೆ ಇದರಿಂದ ಕೊಪ್ಪಳ ವಿಜಯನಗರ ಬಳ್ಳಾರಿ ಜಿಲ್ಲೆಗಳಿಂದ ಮಂತ್ರಾಲಯ, ಹೈದರಬಾದ್ ಕಡೆಗೆ ನೇರ ಸಂಪರ್ಕ ಇಲ್ಲದಂತಾಗಿದೆ ಆದುದರಿಂದ ರೈಲನ್ನು ಮೊದಲಿನಂತೆ ಬೆಳಗಾವಿ-ಭದ್ರಾಥಲಂ ನಡುವೆ ಖಾಯಂ ಗಾಡಿಯಾಗಿ ಮಾಡಿ ಸಂಚಾರ ಪುನರಾರಂಭಿಸಬೇಕು. >>4

# ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ವಿತರಣೆ ಆರಂಭ

**ಹಂಪಿ ಟೈಮ್ಸ್ ಹೊಸಪೇಟೆ**
ಹೊಸಪೇಟೆ ವಿಭಾಗದಿಂದ 2024-25ನೇ ಸಾಲಿನ ವಿದ್ಯಾರ್ಥಿ ಉಚಿತ/ರಿಯಾಯಿತಿ ಬಸ್ ಪಾಸುಗಳನ್ನು ಇಡಿಸಿಎಸ್ ಇಲಾಖೆಯ ಸೇವಾಸಿಂಧು ತಂತ್ರಾಂಶದ ಮುಖಾಂತರ ಸಂಪೂರ್ಣ ಗಣಕೀಕೃತವಾಗಿ ಪಾಸುಗಳನ್ನು ವಿತರಿಸಲು ಕ್ರಮಕೈಗೊಳ್ಳಲಾಗಿರುತ್ತದೆ. ವಿಭಾಗದ ವ್ಯಾಪ್ತಿಯಲ್ಲಿ ಬರುವ ಹೊಸಪೇಟೆ, ಕೂಡ್ಲಿಗಿ, ಕೊಟ್ಟೂರು, ಹಡಗಲಿ, ಹಗರಿಬೊಮ್ಮನಹಳ್ಳಿ ಮತ್ತು ಹರಪ್ಪನಹಳ್ಳಿ ಘಟಕಗಳಿಂದ ಪಾಸು ವಿತರಿಸಲು ಸೂಕ್ತ ವ್ಯವಸ್ಥೆ ಮಾಡಲಾಗಿರುತ್ತದೆ.

2024-25ನೇ ಸಾಲಿನಲ್ಲಿ ವಿಭಾಗದಲ್ಲಿ ಪಾಸು ವಿತರಿಸಲು ಪಾಸು ಕೌಂಟರಗಳನ್ನು ಸ್ಥಾಪಿಸಲಾಗಿರುತ್ತದೆ.

ಮೇ 27ರಿಂದ ವಿದ್ಯಾರ್ಥಿಗಳು ಬಸ್ ಪಾಸ್‌ಗಾಗಿ ಸೇವಾಸಿಂಧು ಪೋರ್ಟಲ್ URL-sevasindhu.karnataka.gov.in ತಂತ್ರಾಂಶದಲ್ಲಿ ಗೋ ಲೈವ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. 2024ರ ಜೂನ್ 1ನೇ ತಾರೀಖಿನಿಂದ ವಿದ್ಯಾರ್ಥಿ ಬಸ್ ಪಾಸ್ ವಿತರಿಸಲು ಕ್ರಮವಹಿಸಲಾಗುವುದು ಎಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ನಿಯಂತ್ರಣಾಧಿಕಾರಿಗಳು ತಿಳಿಸಿದ್ದಾರೆ.

### ಪಾಸ್ ವಿತರಿಸುವ ಕೇಂದ್ರಗಳು

**ಹೊಸಪೇಟೆ ಘಟಕ:** 1) ಹೊಸಪೇಟೆಯ ಬಸ್ ನಿಲ್ದಾಣ 2) ಕರ್ನಾಟಕ ಒನ್, ತಾಲೂಕು ಕೋರ್ಟ್‌ನ ಹಿಂದುಗಡೆ, ಕೆಎಲ್‌ಎಸ್ ಕಾಂಪ್ಲೆಕ್ಸ್, ಮಹಿಳಾ ಸಮಾಜ ಶಾಲೆ ಹತ್ತಿರ ಹೊಸಪೇಟೆ.
**ಕೂಡ್ಲಿಗಿ ಘಟಕ:** ಕೂಡ್ಲಿಗಿ ಘಟಕದಲ್ಲಿ 1) ಕರ್ನಾಟಕ ಒನ್, 7ನೇ ವಾರ್ಡ್, ವೆಂಕಟೇಶ್ವರ ದೇವಸ್ಥಾನ ರಸ್ತೆ ಕೂಡ್ಲಿಗಿ ಹಾಗೂ 2) ಕರ್ನಾಟಕ ಒನ್, ತಾಲೂಕು ಕಚೇರಿ, 1ನೇ ಮುಖ್ಯ ರಸ್ತೆ, ಕೊಟ್ಟೂರು.
**ಹಡಗಲಿ ಘಟಕ:** ಹಡಗಲಿ ಘಟಕದಲ್ಲಿ ಕರ್ನಾಟಕ ಒನ್, ವಾರ್ಡ್ ನಂ-9, ಸೊಪ್ಪಿನ ಕಾಳಮ್ಮ ಬಡಾವಣೆ ಹತ್ತಿರ, ಓಂ ಶಾಂತಿ ನಿಲಯ, ಹಡಗಲಿ
**ಹಗರಿಬೊಮ್ಮನಹಳ್ಳಿ ಘಟಕ:** ಕರ್ನಾಟಕ ಒನ್, ವಿಠ್ಠಲ್ ಆಸ್ಪತ್ರೆ ಎದುರು, ಅಂಚೆ ಕಚೇರಿ ಮುಖ್ಯ ರಸ್ತೆ, ರಾಮನಗರ, ಹಗರಿಬೊಮ್ಮನಹಳ್ಳಿ.
**ಹರಪನಹಳ್ಳಿ ಘಟಕ:** ಹರಪನಹಳ್ಳಿ ಘಟಕದಲ್ಲಿ ಹರಪನಹಳ್ಳಿ ಬಸ್ ನಿಲ್ದಾಣದಲ್ಲಿ ಪಾಸು ಕೌಂಟರ್ ಸ್ಥಾಪಿಸಲಾಗಿರುತ್ತದೆ.

# ಮೆಟ್ರಿಕ್ ಪೂರ್ವ ಬಾಲಕ ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**
2024-25ನೇ ಸಾಲಿನಲ್ಲಿ ಹೊಸಪೇಟೆ ತಾಲೂಕಿನಲ್ಲಿರುವ ವಿವಿಧ ಸಮಾಜ ಕಲ್ಯಾಣ ಇಲಾಖೆಯ ಪರಿಶಿಷ್ಟ ಜಾತಿಯ ಮೆಟ್ರಿಕ್ ಪೂರ್ವ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ ಸ್ಥಾನಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಮೆಟ್ರಿಕ್ ಪೂರ್ವ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳಾದ ಡಾ. ಬಿ.ಆರ್ ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಹೊಸಪೇಟೆ, ಡಾ. ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಮರಿಯಮ್ಮನಹಳ್ಳಿ, ಡಾ. ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಕಮಲಾಪುರ, ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ ಹೊಸಪೇಟೆ, ಡಾ. ಬಿ.ಆರ್ ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ ಕಮಲಾಪುರ ಇಲ್ಲಿ ಪ್ರವೇಶ ಪಡೆಯಲು ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ಅರ್ಜಿಯನ್ನು ಜೂನ್ 15 ರೊಳಗಾಗಿ ಆನ್‌ಲೈನ್ ಮೂಲಕ ಸಮಾಜ ಕಲ್ಯಾಣ ಇಲಾಖಾ ವೆಬ್‌ಸೈಟ್ www.sw.kar.nic.in ನಲ್ಲಿ ಸಲ್ಲಿಸಬೇಕು.

ಅಂತಿಮ ಪ್ರತಿಯ ಜೊತೆಗೆ ವಿದ್ಯಾರ್ಥಿಯ ಆಧಾರ್ ಕಾರ್ಡ್, ವಿದ್ಯಾರ್ಥಿಯ ಎಸ್‌ಎಟಿಎಸ್ ಸಂಖ್ಯೆ, ವಿದ್ಯಾರ್ಥಿಯ ಜಾತಿ ಪ್ರಮಾಣ ಪತ್ರ, ವಿದ್ಯಾರ್ಥಿಯ ಆದಾಯ ಪ್ರಮಾಣ ಪತ್ರ, ಮೊಬೈಲ್ ಸಂಖ್ಯೆ, ವಿದ್ಯಾರ್ಥಿಯ ಪೋಟೋ, ವಿದ್ಯಾರ್ಥಿಯ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆ ಸಂಖ್ಯೆ, ಹಿಂದಿನ ವರ್ಷದ ಅಂಕಪಟ್ಟಿಯನ್ನು ಜೊತೆಗೆ ವಿದ್ಯಾರ್ಥಿಗಳು ಪ್ರವೇಶ ಪಡೆದ ಶಾಲೆಯ ಹೆಸರನ್ನು ನಮೂದಿಸಿ ಎಲ್ಲ ದಾಖಲೆಗಳನ್ನು ಸಹ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ 9480843076ಗೆ ಸಂಪರ್ಕಿಸಿ.


